ಪಾಕ್ಷಿಕ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ಒರಿಸ್ಸಾ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಸ್ವಾತಂತ್ರ ದಿನಾಚರಣೆಯ ಸಂದರ್ಭದಲ್ಲಿ ಭುವನೇಶ್ವರದಲ್ಲಿ 'ಉತ್ಕಲ ವಿಪನ್ನ ಸಹಾಯತ ಸಮಿತಿ, ಒಡಿಶಾ' ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಷ್ಟ್ರಧ್ವಜಾರೋಹಣ ಮಾಡಿದರು.

ಸಂಪುಟ : 47 | ಸಂಚಿಕೆ : 09 | ಭಾದ್ರಪದ–ಆಶ್ವಯುಜ | ಕಲಿಯುಗಾಬ್ದ 5127 | 01–09–2025 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

# ಭಾರತೀಯ ಜ್ಞಾನಪರಂಪರೆಯ ರಾಯಭಾರಿ ಶಿಕ್ಷಕ

■ ಡಾ. ಟಿ.ಎನ್. ಲೋಕೇಶ್

**ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ**
**ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರುವೇ ನಮಃ**

ಅಜ್ಞಾನವೆಂಬ ಕತ್ತಲಿನಿಂದ ಅಂಧನಾದವನ ಕಣ್ಣನ್ನು ಜ್ಞಾನವೆಂಬ ಅಂಜನ ಶಲಾಕೆಯಿಂದ ಬಿಡಿಸಿದ ಶ್ರೀಗುರುವಿಗೆ ನಮಸ್ಕಾರ ಎಂಬುದೇ ಈ ಶ್ಲೋಕದ ತಾತ್ಪರ್ಯವಾಗಿದೆ. ಅದು ಸಾವಿರಾರು ವರ್ಷಗಳ ಕತ್ತಲೆಯೇ ಇರಲಿ, ಚಿಕ್ಕ ಹಣತೆಯನ್ನು ಬೆಳಗಿಸಿದ ತಕ್ಷಣವೇ ಕತ್ತಲೆ ಎಲ್ಲಾ ಮಾಯವಾಗುತ್ತದೆ. ಹಾಗೆಯೇ ಸಾವಿರ ಜನ್ಮದ ಅಜ್ಞಾನದ ಅಂಧಕಾರದಿಂದ ಜೀವವು ಬಂಧಿತವಾಗಿರಬಹುದು ಆದರೆ ಜೀವನದಲ್ಲಿ ಜ್ಞಾನಜ್ಯೋತಿಯಾದ ಶ್ರೀ ಗುರುವಿನ ಆಗಮನದಿಂದ ತಕ್ಷಣ ಅಜ್ಞಾನದ ಅಂಧಕಾರವೆಲ್ಲ ಕಳೆದು ಅವನು ಜೀವನ್ಮುಕ್ತನಾಗುವನು.

ಮಾನವನು ಭೌತಿಕವಾಗಿ ಎರಡು ಕಣ್ಣುಗಳನ್ನು ಹೊಂದಿದ್ದರೂ ಸಹ ಅವನಿಗೆ ಜ್ಞಾನವೆಂಬ ಮೂರನೇ ಕಣ್ಣನ್ನು ನೀಡುವವನು ಶ್ರೀ ಗುರು. ಆದ್ದರಿಂದಲೇ ಭಾರತೀಯ ಸನಾತನ ಸಂಸ್ಕೃತಿಯಲ್ಲಿ ಗುರುವಿಗೆ ಉತ್ಕೃಷ್ಟವಾದ ಸ್ಥಾನ ಕಲ್ಪಿಸಲಾಗಿದೆ. ತೈತ್ತೀರಿಯ ಉಪನಿಷತ್ 'ಆಚಾರ್ಯ ದೇವೋಭವ' ಎಂದಿದೆ. ಅಂದರೆ ಗುರು ಶಿಕ್ಷಣದ ಮೂಲಕ ಜೀವಸಂಸ್ಕಾರ ಮತ್ತು ಆತ್ಮಜ್ಞಾನವನ್ನು ನೀಡುವುದರಿಂದ ಗುರು ಸೃಷ್ಟಿ, ಸ್ಥಿತಿ, ಲಯ ಕರ್ತರಿಗೆ ಸಮಾನನೆಂದು ಗೌರವಿಸಲಾಗಿದೆ.

ಪುರಾಣ ಮಹಾಪುರುಷರಾದ ಶ್ರೀರಾಮಚಂದ್ರ ಮತ್ತು ಶ್ರೀಕೃಷ್ಣರು ವಿಷ್ಣುವಿನ ಅವತಾರವೆಂದು ಉಲ್ಲೇಖಿಸಲಾಗಿದ್ದರೂ ಸಹ ಗುರುವಿನ ಮಾರ್ಗದರ್ಶನದಲ್ಲಿ ತಮ್ಮ ದೈವ ಜೀವನವನ್ನು ರೂಪಿಸಿಕೊಂಡರು. ಶ್ರೀ ಗುರು ಗಂಗಾ ನದಿಯಂತೆ, ಸಾಮಾನ್ಯರು ಕಸವನ್ನೆಲ್ಲಾ ಗಂಗಾ ನದಿಗೆ ಎಸೆದರೂ ಗಂಗಾ ನದಿಯ ಪಾವಿತ್ರ್ಯತೆ ಕಡಿಮೆಯಾಗುವುದಿಲ್ಲ. ಅಂತೆಯೇ ಶ್ರೀ ಗುರು ಎಲ್ಲಾ ವಿಧದ ನೀಚ, ಅಪಮಾನ ಮತ್ತು ನಿಂದನೆಗಳಿಂದ ಮೇಲಿರುವವನು ಎಂದಿದ್ದಾರೆ ಶ್ರೀರಾಮಕೃಷ್ಣ ಪರಮಹಂಸರು.

ಭಕ್ತಿಭಂಡಾರಿ ಬಸವಣ್ಣನವರು ತಮ್ಮ ವಚನದಲ್ಲಿ ಗುರುವಿನ ಮಹತ್ವವನ್ನು ಈ ಕೆಳಕಂಡಂತೆ ವರ್ಣಿಸಿದ್ದಾರೆ.

**'ಮಡಿಕೆಯ ಮಾಡುವಡೆ ಮಣ್ಣೆ ಮೊದಲು**
**ತೊಡುಗೆಯ ಮಾಡುವಡೆ ಹೊನ್ನೆ ಮೊದಲು**
**ಶಿವಪಥವನರಿವಡೆ ಗುರುಪಥವೇ ಮೊದಲು'**

ಚೈತನ್ಯನು, ಶಾಶ್ವತನು, ಶಾಂತನು ಆಕಾಶವನ್ನು ಮೀರಿ ನಿಂತವನು, ದೋಷವಿಲ್ಲದವನು, ಬಿಂದು – ನಾದಕಲೆಗಳಿಗೆ ಅತೀತನು ಆದ ಶ್ರೀಗುರುವನ್ನು ಕೃತಜ್ಞಾಪೂರ್ವಕವಾಗಿ ನಮಿಸುವ ಹಲವು ಸಂದರ್ಭಗಳು ನಮ್ಮ ಸಂಸ್ಕೃತಿಯಲ್ಲಿದೆ.

**ಆದರ್ಶ ಶಿಕ್ಷಕ ಡಾ. ರಾಧಾಕೃಷ್ಣನ್:** ಅನಾದಿ ಕಾಲದಿಂದ, ಇಂದಿನವರೆಗೂ ಶ್ರೇಷ್ಠ ಗುರುಪರಂಪರೆಯನ್ನು ಭಾರತ ಕಂಡಿದೆ. ಅನೇಕ ಮಂದಿ ಗುರುಗಳು ತಮ್ಮ ಜೀವನವನ್ನೇ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ, ವ್ಯಕ್ತಿತ್ವ ವಿಕಸನಕ್ಕಾಗಿ ಮುಡಿಪಿಟ್ಟಿದ್ದಾರೆ. ಅಂತಹವರಲ್ಲಿ ಭಾರತ ಕಂಡ ಶ್ರೇಷ್ಠ ದಾರ್ಶನಿಕ, ರಾಜನೀತಿಜ್ಞ, ಶಿಕ್ಷಣ ತಜ್ಞ, ಶಿಕ್ಷಕ ಹಾಗೂ ಸ್ವಾತಂತ್ರ್ಯ ಭಾರತದ ಎರಡನೇ ರಾಷ್ಟ್ರಪತಿಯಾಗಿದ್ದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರು ಪ್ರಮುಖರು. ಅವರ ಜನ್ಮ ದಿನಾಂಕ ಸೆಪ್ಟೆಂಬರ್ 05ನ್ನು 'ಶಿಕ್ಷಕರ ದಿನ'ವಾಗಿ ಆಚರಿಸಲಾಗುತ್ತದೆ. ಭಾರತದಾದ್ಯಂತ ಶಿಕ್ಷಕರಿಗೆ ಗೌರವಪೂರ್ವಕವಾಗಿ ಹಬ್ಬದಂತೆ ಆಚರಿಸುವ ದಿನವೇ ಈ ಶಿಕ್ಷಕರ ದಿನಾಚರಣೆ. ಮೂಲತಃ ವೃತ್ತಿಯಿಂದ ಶಿಕ್ಷಕರಾಗಿದ್ದ ರಾಧಾಕೃಷ್ಣನ್ ಅವರು ಶಿಕ್ಷಕವೃತ್ತಿಯ ಮೌಲ್ಯಗಳ ಪ್ರತಿರೂಪವಾಗಿದ್ದರು. ಅವರ ಅಪಾರ ಶಿಷ್ಯವರ್ಗ ಅವರನ್ನು ಭೇಟಿ ಮಾಡಿ ಸೆಪ್ಟೆಂಬರ್ 5 ರಂದು ನಿಮ್ಮ ಹುಟ್ಟುಹಬ್ಬವನ್ನು ನಾವೆಲ್ಲಾ ವಿಜೃಂಭಣೆಯಿಂದ ಆಚರಿಸುತ್ತೇವೆ ಎಂಬ ಕೋರಿಕೆಯನ್ನು ಮಾಡಿದಾಗ ಅದನ್ನು ಅತ್ಯಂತ ನಮ್ರತೆಯಿಂದ ನಿರಾಕರಿಸಿದ ರಾಧಾಕೃಷ್ಣನ್ ರವರು ತನ್ನ ಜನ್ಮದಿನವನ್ನು ಆಚರಿಸುವ ಬದಲು



(ಸೆಪ್ಟೆಂಬರ್ 5 ಶಿಕ್ಷಕರ ದಿನಾಚರಣೆ ವಿಶೇಷ ಲೇಖನ)

ರಾಷ್ಟ್ರಕ್ಕೆ ಗುರುಪರಂಪರೆ ನೀಡಿದ ಮಹತ್ವವನ್ನು ಸ್ಮರಿಸಿ ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನಾಚರಣೆ ಆಚರಿಸಿ ಎಂದು ಶಿಷ್ಯವೃಂದಕ್ಕೆ ತಾಕೀತು ಮಾಡಿದರು. 1962ರಲ್ಲಿ ಮೊದಲ ಶಿಕ್ಷಕರ ದಿನವನ್ನು ಆಚರಿಸಲಾಯಿತು. ಅಂದಿನಿಂದ ಇಂದಿನವರೆಗೆ ಸೆಪ್ಟೆಂಬರ್05ನ್ನು ಶಿಕ್ಷಕರ ದಿನಾಚರಣೆ ಎಂದು ಆಚರಿಸಲಾಗುತ್ತಾ ಬರಲಾಗಿದೆ.

**ರಾಷ್ಟ್ರಶಿಲ್ಪಿ ಶಿಕ್ಷಕ:** ಪ್ರತಿ ಮಗುವೂ ತನ್ನ ವಿದ್ಯಾರ್ಥಿ ಜೀವನದಲ್ಲಿ ತನ್ನ ತಂದೆ–ತಾಯಿಗಿಂತ ಹೆಚ್ಚು ಸಮಯ ತೊಡಗಿಸಿಕೊಳ್ಳುವುದು ಶಾಲೆಯಲ್ಲಿ, ಶಿಕ್ಷಕರ ಮಾರ್ಗದರ್ಶನದಲ್ಲಿ. ಹಾಗಾಗಿ ರಾಷ್ಟ್ರದ ಶಿಕ್ಷಣದ ಗುಣಮಟ್ಟ ಪ್ರತ್ಯಕ್ಷವಾಗಿ ಶಿಕ್ಷಕನ ವ್ಯಕ್ತಿತ್ವವನ್ನು ಅವಲಂಬಿಸಿದೆ. ಅದೆಷ್ಟೇ ಶ್ರೇಷ್ಠವಾದ ಪಠ್ಯಕ್ರಮವನ್ನು, ಶಿಕ್ಷಣ ವ್ಯವಸ್ಥೆಯನ್ನು ಯಾವುದೇ ದೇಶ ಹೊಂದಿದ್ದರೂ, ಅದನ್ನು ಸಮರ್ಥವಾಗಿ ವಿದ್ಯಾರ್ಥಿಗಳ ಹೃದಯಕ್ಕೆ ಇಳಿಸದೇ ಇದ್ದರೆ ಅದು ವ್ಯರ್ಥ. ಹಾಗಾಗಿ ವಿದ್ಯಾರ್ಥಿಗಳ ಜೀವನದಲ್ಲಿ ಶಿಕ್ಷಕನ ಪಾತ್ರ ಮಹತ್ವವಾದದ್ದು. ಆದ ಕಾರಣ ಶಿಕ್ಷಕರು ಎಲ್ಲಾ ಮೌಲ್ಯಗಳ ಗಣಿಯಂತಿರಬೇಕು. ಶಿಕ್ಷಕ ವೃತ್ತಿಯನ್ನು ನಿಸ್ವಾರ್ಥ ಸೇವೆಯೆಂದು ಪರಿಭಾವಿಸಿ ಸದೃಢ ರಾಷ್ಟ್ರನಿರ್ಮಾಣ ಮಾಡುವ ಕೈಂಕರ್ಯದಲ್ಲಿ ಭಾಗಿಯಾಗುವುದು ಪ್ರತಿಯೊಬ್ಬ ಶಿಕ್ಷಕರ ಕರ್ತವ್ಯವಾಗಿದೆ. ಶಿಕ್ಷಕ ರಾಷ್ಟ್ರಶಿಲ್ಪಿ, ರಾಷ್ಟ್ರ ನಿರ್ಮಾಪಕನಾಗಿ ದೇಶ ಕಟ್ಟುವ ಕಾಯಕದಲ್ಲಿ ತನ್ನನ್ನು ತಾನು ಸಮರ್ಪಿಸಿಕೊಂಡಿರುತ್ತಾನೆ. ರಾಷ್ಟ್ರೀಯ ಶಿಕ್ಷಣ ನೀತಿ – 2020 ಸಹ ಶಿಕ್ಷಕನ ಮಹತ್ವವನ್ನು, ಔನತ್ಯವನ್ನು ಕೊಂಡಾಡಿದೆ.

ಸದೃಢ ಮನಸ್ಥಿತಿ, ಮೌಲ್ಯಾಧಾರಿತ ವ್ಯಕ್ತಿತ್ವ ಹೊಂದಿರುವವರು ಶಿಕ್ಷಕ ವೃತ್ತಿಗೆ ಬರುವ ಅನಿವಾರ್ಯತೆ ಇಂದು ಎದುರಾಗಿದೆ. ತಂದೆ ತಾಯಿ ಮಗುವಿಗೆ ಕೇವಲ ಭೌತಿಕ ಜನ್ಮ ನೀಡಿದರೆ, ಶ್ರೀ ಗುರು ಮಗುವಿಗೆ ಸಂಸ್ಕಾರ ನೀಡಿ ಆತನನ್ನು ಸಮಾಜದ ಆಸ್ತಿಯನ್ನಾಗಿ ಪರಿವರ್ತಿಸುತ್ತಾನೆ. ಯಾವ ದೇಶದಲ್ಲಿ ಉತ್ಕೃಷ್ಟ ಶಿಕ್ಷಕರ ಕೊರತೆ ಇರುವುದೋ ಆ ದೇಶದ ಅಭಿವೃದ್ಧಿ ಕುಂಠಿತವಾಗುತ್ತದೆ. ಹಾಗಾಗಿ ಶಿಕ್ಷಕ ವೃತ್ತಿ ಒಂದು ಜವಾಬ್ದಾರಿಯುತ ಮತ್ತು ಪವಿತ್ರ ಕಾರ್ಯವಾಗಿದೆ. ಶಿಕ್ಷಕ ತರಬೇತಿಯ ಅಂಕಪಟ್ಟಿ ಮಾತ್ರವೇ ಉತ್ತಮ ಶಿಕ್ಷಕನನ್ನು ಅಳೆಯುವ ಮಾನದಂಡವಲ್ಲ. ಅಂಕ ಮಾತ್ರ ಆಗಲೂ ಬಾರದು. ಆದರೆ ಆತ ಪಡೆದ ತರಬೇತಿಯ ಗುಣಮಟ್ಟ, ಪಡೆದ ಅನುಭವ, ಗಳಿಸಿದ ಜ್ಞಾನ ಎಲ್ಲವೂ ಶಿಕ್ಷಕನನ್ನು ಸಮಾಜದಲ್ಲಿ ಒಬ್ಬ ಅನುಕರಣೀಯ, ಆದರ್ಶ ವ್ಯಕ್ತಿಯನ್ನಾಗಿ ರೂಪಿಸಲು ಸಾಧ್ಯ.

**ಶಿಕ್ಷಕ ವೃತ್ತಿಗೆ ಬೇಕು ಪೋಷಕರ ಪ್ರೋತ್ಸಾಹ:** ಜಗತ್ತಿನಲ್ಲಿ ಭಾವನಾತ್ಮಕವಾಗಿ ಅತ್ಯಂತ ಹೆಚ್ಚು ಗೌರವಿಸಲ್ಪಡುವ ವೃತ್ತಿಗಳಲ್ಲಿ ಶಿಕ್ಷಕ ವೃತ್ತಿಯು ಅಗ್ರಸ್ಥಾನದಲ್ಲಿ ನಿಲ್ಲುತ್ತದೆ. ಪ್ರತಿ ಮನೆಯಲ್ಲೂ ತಮ್ಮ ಮಕ್ಕಳನ್ನು ಒಬ್ಬ ಒಳ್ಳೆಯ ವೈದ್ಯ, ಇಂಜಿನಿಯರ್, ವಕೀಲ, ಉದ್ಯಮಿ, ವಿಜ್ಞಾನಿಯಾಗಬೇಕೆಂದೆಲ್ಲಾ ಬಯಸುವುದು ಸಹಜ. ಹಾಗಾಗಿ ಒಳ್ಳೆಯ ವಿದ್ಯಾಭ್ಯಾಸ ಸಿಗುವ ಶಾಲೆಗಳಿಗೆ, ಒಳ್ಳೆಯ ವ್ಯವಸ್ಥೆಗಳಿರುವ ವಿದ್ಯಾಲಯಗಳಿಗೆ ಸೇರಿಸುತ್ತಾರೆ, ಲಕ್ಷಾಂತರ ರೂಪಾಯಿಗಳನ್ನೂ ಖರ್ಚು ಮಾಡುತ್ತಾರೆ. ಮಧ್ಯಮ ವರ್ಗದವರು ಲಕ್ಷಗಟ್ಟಲೇ ಲೋನ್ ಮಾಡಿಯಾದರೂ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಮುಂದಾಗುತ್ತಾರೆ. ಆದರೆ ಎಷ್ಟೇ ಹಣ ಖರ್ಚು ಮಾಡಿದರೂ, ವಿದ್ಯೆಯನ್ನು ಸರಳವಾಗಿ ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಸುವ ಶಿಕ್ಷಕರಿಲ್ಲದಿದ್ದರೆ ಈ ಪ್ರಯತ್ನಗಳೆಲ್ಲ ವ್ಯರ್ಥ. ಆದ್ದರಿಂದ ವಿದ್ಯಾರ್ಥಿಗಳಿಗೆ ಉತ್ತಮವಾಗಿ ಬೋಧನೆ ಮಾಡುವ ಶಿಕ್ಷಕರ ಅಗತ್ಯತೆ ಪ್ರತಿಯೊಂದು ಕಾಲಕ್ಕೂ ಇದ್ದೇ ಇದೆ. ಇದರ ಅನಿವಾರ್ಯತೆಯನ್ನು ಅರಿತು ಸಮಾಜ ರೂಪಿಸುವುದಕ್ಕಾಗಿ, ಶಿಕ್ಷಕರಾಗುವುದಕ್ಕೇ ಮನಸ್ಸು ಮಾಡಬೇಕಾದ ಕರ್ತವ್ಯ ಇಂದಿನ ಪೀಳಿಗೆಯಲ್ಲಿದೆ. ಅದಕ್ಕೆ ಪ್ರೋತ್ಸಾಹ ಪೋಷಕರು ನೀಡಬೇಕಿದೆ.

ತಾನು ಏನಾಗಬೇಕೆಂದು ನಿಶ್ಚಯಿಸುವ ಆಯ್ಕೆ ವಿದ್ಯಾರ್ಥಿಗಳದ್ದೇ ಆಗಿರುತ್ತದೆ. ಅದಕ್ಕೆ ತಕ್ಕಂತೆ ಅವರು ಲಭ್ಯವಿರುವ ಹಲವು ಕೋರ್ಸ್‌ಗಳನ್ನೂ ಆಯ್ಕೆ ಮಾಡಿಕೊಳ್ಳುತ್ತಾರೆ. ಆದರೆ ತಮ್ಮ ಮುಂದಿನ ಪೀಳಿಗೆ ಹೇಗಿರಬೇಕು, ಅವರನ್ನು ಹೇಗೆ ಸಮಾಜಕ್ಕೆ ಪೂರಕವಾಗಿ ತಯಾರು ಮಾಡಬೇಕು ಎನ್ನುವುದನ್ನು ನಿರ್ಧರಿಸುವ ಶಕ್ತಿ ಒಬ್ಬ ಸಮರ್ಥ ಶಿಕ್ಷಕನಿಗೆ ಇರುತ್ತದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಇಂದಿನ ಯುವಪೀಳಿಗೆ ಶಿಕ್ಷಕ ವೃತ್ತಿಯ ಕಡೆಗೂ ಪ್ರಾಧಾನ್ಯತೆ ನೀಡಬೇಕಾದ ಅನಿವಾರ್ಯತೆ ಇದೆ. ಶಿಕ್ಷಕ ವೃತ್ತಿಯನ್ನು ಪ್ರೀತಿಸುವವರು, ಶಿಕ್ಷಕನ ಸ್ಥಾನಕ್ಕೆ ನ್ಯಾಯವನ್ನು ಒದಗಿಸುವವರು ಶಿಕ್ಷಕ ವೃತ್ತಿಗೆ ಬರಬೇಕಾಗಿದೆ.

**ಜ್ಞಾನಪರಂಪರೆಯ ರಾಯಭಾರಿ:** ಶಿಕ್ಷಕರು ನಿಜಾರ್ಥದಲ್ಲಿ ಭಾರತೀಯತೆಯನ್ನು ಮುಂದಿನ ಪೀಳಿಗೆಗೆ ತಲುಪಿಸುವ ರಾಯಭಾರಿಗಳು. ಈ ನಾಡಿನ ಭವ್ಯ ಇತಿಹಾಸವನ್ನು ಗಮನಿಸಿದಾಗ ಇಲ್ಲಿನ, ಸಂಸ್ಕೃತಿ, ಆಚರಣೆಗಳು, ಶ್ರೇಷ್ಠ ಚಿಂತನೆಗಳೆಲ್ಲವೂ ಮುಂದಿನ ಪೀಳಿಗೆಗೆ ತಲುಪಿಸುವ ಕಾರ್ಯದಲ್ಲಿ ಗಮನಾರ್ಹ ಕೆಲಸ ಮಾಡಿರುವುದು ಇಲ್ಲಿನ ಗುರುಪರಂಪರೆಯೇ ಆಗಿದೆ. ಇಂದು ಶಿಕ್ಷಣದಲ್ಲಿ ಭಾರತೀಯತೆಯ ಕುರಿತು ಚರ್ಚೆಯಾಗುತ್ತಿರುವ ಹೊತ್ತಿಗೆ ಶಿಕ್ಷಕರಾಗುವವರು ಭಾರತವನ್ನು ಸರಿಯಾಗಿ ಅರಿತು, ಅದನ್ನು ವಿದ್ಯಾರ್ಥಿಗಳಿಗೆ ಬೋಧಿಸಬೇಕಿದೆ. ಅವರನ್ನೂ ಭಾರತದ ಮೌಲ್ಯಗಳನ್ನು ತಮ್ಮ ಮುಂದಿನ ಪೀಳಿಗೆಗೆ ಪಸರಿಸುವ ಕಾಯಕದಲ್ಲಿ ತೊಡಗಿಸಿಕೊಳ್ಳುವ ಶಿಕ್ಷಕರಾಗುವಂತೆ ಪ್ರೇರೇಪಿಸಬೇಕು.

2047ರ ವಿಕಸಿತ ಭಾರತದ ಕನಸನ್ನು ನನಸು ಮಾಡುವ ಈ ಅಮೃತ ಕಾಲಘಟ್ಟದಲ್ಲಿ ಯುವಜನತೆ ಶಿಕ್ಷಕ ವೃತ್ತಿಯನ್ನು ಗೌರವಿಸಲಿ, ಶಿಕ್ಷಕರಾಗುವತ್ತ ಗಮನವಹಿಸಲಿ ಹಾಗೂ ಪೋಷಕರು ತಮ್ಮ ಮಕ್ಕಳು ಶಿಕ್ಷಕ ವೃತ್ತಿಯನ್ನು ಸ್ವೀಕರಿಸಲು ಪ್ರೋತ್ಸಾಹಿಸಲಿ. ಆತ್ಮನಿರ್ಭರ ಭಾರತವಾಗುವ ಪ್ರಯತ್ನದಲ್ಲಿ ಜ್ಞಾನವನ್ನು ಬಯಸಿ ಬರುವ ವಿದ್ಯಾರ್ಥಿಗಳಿಗೆ ಜ್ಞಾನದಾನ ಮಾಡುವ ಸಮರ್ಥ ಶಿಕ್ಷಕರನ್ನು ಒಳಗೊಳ್ಳುವುದೂ ಪ್ರಮುಖವಾದ ಅಂಶವೇ ಆಗಿದೆ. ಭಾರತ ಹಿಂದಿನಿಂದಲೂ ಜಗತ್ತಿನಲ್ಲಿ ಗುರುತಿಸಿಕೊಂಡಿದ್ದ ತನ್ನ ಜ್ಞಾನ ಪ್ರಸರಣದ ಕಾರಣಕ್ಕಾಗಿಯೇ ಎನ್ನುವುದನ್ನು ಮರೆಯುವಂತಿಲ್ಲ. ಜಗತ್ತಿನಲ್ಲಿ ಹಲವು ದೇಶಗಳು ಸುಸಂಸ್ಕೃತಗೊಂಡಿದ್ದು ಇಲ್ಲಿನ ಗುರುಗಳು ಅಲ್ಲಿಗೆ ಹೋಗಿ ಜ್ಞಾನದಾನ ಮಾಡಿದ ಕಾರಣಕ್ಕಾಗಿಯೇ ಎನ್ನುವುದು ಇತಿಹಾಸ. ಇತಿಹಾಸದ ಗತವೈಭವವನ್ನು ಮರುಕಳಿಸಲು, ಹಾಗೆಯೇ ಜಗತ್ತಿಗೆ ಭಾರತೀಯ ಶಿಕ್ಷಕರ ಕೊಡುಗೆಯ ಮಹತ್ವ ಜಗಜ್ಜಾಹೀರುಗೊಳಿಸಬೇಕಿದೆ. ಯುವಜನತೆ ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿಕೊಂಡು ರಾಷ್ಟ್ರ ಸೇವೆಯಲ್ಲಿ ಭಾಗಿಯಾಗಬೇಕಿದೆ. ಮತ್ತೊಮ್ಮೆ ಭಾರತ ಜಗದ್ಗುರು ಭಾರತವಾಗಿ ಇಡೀ ಮನುಕುಲಕ್ಕೆ ದಾರಿದೀಪವಾಗಬೇಕಿದೆ.

## ಸಂಸ್ಮರಣೆ — ರಾಸ್ ಬಿಹಾರಿ ಬೋಸ್ (ಮೇ 25, 1886 - ಜನವರಿ 21, 1945)

ನೇತಾಜಿ ಸುಭಾಶ್ ಚಂದ್ರ ಬೋಸ್ ಅವರು ಮುನ್ನಡೆಸಿದ ಇಂಡಿಯನ್ ನ್ಯಾಶನಲ್ ಆರ್ಮಿಯನ್ನು ಕಟ್ಟುವುದಕ್ಕೆ ಅಡಿಪಾಯವನ್ನು ಹಾಕಿದ ಮಹಾನ್ ಕ್ರಾಂತಿಕಾರಿ ರಾಸ್ ಬಿಹಾರಿ ಬೋಸ್.



ರಾಸ್ ಬಿಹಾರಿ ಬೋಸ್ ಅವರು ಮೇ 25, 1886ರಂದು ಪಶ್ಚಿಮ ಬಂಗಾಳದ ಬುರ್ದ್ವಾನಿನ ಸುಬಲ್ದಹಾ ಹಳ್ಳಿಯಲ್ಲಿ ಜನಿಸಿದರು. ಬೋಸರು ತಮ್ಮ ಸಣ್ಣ ವಯಸ್ಸಿನಲ್ಲೇ ರೆವಲ್ಯೂಷನರಿ ಪಾರ್ಟಿಯನ್ನು ಸೇರಿದರು. ದೆಹಲಿ, ಉತ್ತರ ಪ್ರದೇಶ ಮತ್ತು ಪಂಜಾಬ್‌ಗಳಲ್ಲಿ ರಾಸ್ ಬಿಹಾರಿ ಬೋಸರು ಹಲವಾರು ಕ್ರಾಂತಿಕಾರಿಗಳೊಡನೆ ಬ್ರಿಟಿಷರ ವಿರುದ್ಧದ ಭೂಗತ ಚಟುವಟಿಕೆಗಳಲ್ಲಿ ನಿರತರಾಗಿದ್ದರು. ಭಾರತದ ವೈಸರಾಯ್ ಆಗಿದ್ದ ಲಾರ್ಡ್ ಹಾರ್ಡಿಂಜನ ಮೆರವಣಿಗೆಯ ಸಂದರ್ಭದಲ್ಲಿ ದೆಹಲಿಯ ಚಾಂದಿನಿ ಚೌಕದಲ್ಲಿ ಡಿಸೆಂಬರ್ 23, 1912 ರಂದು ಬಾಂಬ್ ಎಸೆದಾಗ ರಾಸ್ ಬಿಹಾರಿ ಬೋಸರ ಹೆಸರು ಪ್ರಖ್ಯಾತಿ ಪಡೆಯಿತು.

ಈ ಬಾಂಬ್ ಎಸೆದ ನಂತರದಲ್ಲಿ ಬೋಸರು ಚಾಣಾಕ್ಷತನದಿಂದ ಪೊಲೀಸರ ಕಣ್ಣು ತಪ್ಪಿಸಿಕೊಂಡು ವಾರಾಣಾಸಿಯಲ್ಲಿ ಅವಿತು, ಗದರ್ ಪಕ್ಷದ ಕಾರ್ಯಕರ್ತರೊಡನೆ ಏಕಕಾಲದಲ್ಲಿ ಉತ್ತರ ಭಾರತದಲ್ಲೆಲ್ಲಾ ಧ್ವನಿಸುವಂತೆ ವಿವಿಧ ಕ್ರಾಂತಿಕಾರಕ ಹೋರಾಟಗಳಿಗೆ ಸೂತ್ರಧಾರಿಯಾದರು. ರಾಸ್ ಬಿಹಾರಿ ಬೋಸರ ಈ ಎಲ್ಲಾ ಯತ್ನಗಳನ್ನೂ ಬ್ರಿಟಿಷರು ಸದೆಬಡಿದು ಗದರ್ ಕ್ರಾಂತಿಕಾರರಲ್ಲಿ ಬಹಳಷ್ಟು ಜನರನ್ನು ಶಿಕ್ಷೆಗೆ ಒಳಪಡಿಸಿದರಾದರೂ ರಾಸ್ ಬಿಹಾರಿ ಬೋಸರನ್ನು ಮಾತ್ರ ಹಿಡಿಯಲಾಗಲಿಲ್ಲ. ಬ್ರಿಟಿಷರಿಗೆ ಚಳ್ಳೆಹಣ್ಣು ತಿನ್ನಿಸಿ ಜಪಾನಿಗೆ ತೆರಳಿದ್ದ ರಾಸ್ ಬಿಹಾರಿ ಬೋಸರ ಬಗ್ಗೆ ಆತಂಕಗೊಂಡ ಬ್ರಿಟಿಷರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಅವರ ಬಂಧನಕ್ಕೆ ಯತ್ನಿಸಿಯೂ ವಿಫಲರಾದರು. ಇತ್ತ ಜಪಾನಿನಲ್ಲಿ ಭೂಗತನಾಗಿದ್ದುಕೊಂಡಿದ್ದ ಬೋಸರು ಬ್ರಿಟನ್ ವಿರೋಧಿ ದೇಶಗಳ ಸಖ್ಯ ಬೆಳೆಸಿಕೊಳ್ಳತೊಡಗಿದರು.


**ಇಂಡಿಯನ್ ಇಂಡಿಪೆಂಡನ್ಸ್ ಲೀಗ್:** ಮಾರ್ಚ್ 1942ರಲ್ಲಿ ಇಂಡಿಯನ್ ಇಂಡಿಪೆಂಡೆಂಟ್ಸ್ ಲೀಗ್ ಸ್ಥಾಪನೆಗಾಗಿ ಬೋಸರು ಒಂದು ಸಮಾವೇಶವನ್ನು ನಡೆಸಿದರು. ಈ ಸಂಸ್ಥೆಯ ಮೊದಲ ಅಧಿವೇಶನ ಜೂನ್ 1942ರಲ್ಲಿ ಬ್ಯಾಂಕಾಕಿನಲ್ಲಿ ಜರುಗಿತು. ಈ ಸಮಾವೇಶದಲ್ಲಿ ಅವರಿಗೆ ಇಂಡಿಯನ್ ನ್ಯಾಷನಲ್ ಆರ್ಮಿ ಸ್ಥಾಪನೆಗಾಗಿನ ಅಧಿಕಾರವನ್ನು ನೀಡಲಾಯಿತು. ಈ ನಿಟ್ಟಿನಲ್ಲಿ ಅವರು ಜಪಾನಿನಲ್ಲಿದ್ದ ಯುದ್ಧ ಖೈದಿಗಳನ್ನು ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಹೋರಾಟದ ಸೈನಿಕರನ್ನಾಗಿ ಸಂಘಟಿಸಿದರು. 1943 ರಲ್ಲಿ ಸಿಂಗಪೂರಿನಲ್ಲಿ ಇಂಡಿಯನ್ ನ್ಯಾಷನಲ್ ಆರ್ಮಿಯ ನಾಯಕತ್ವವನ್ನು ರಾಸ್ ಬಿಹಾರಿ ಬೋಸರು ಸುಭಾಷ್ ಚಂದ್ರ ಬೋಸರಿಗೆ ವರ್ಗಾಯಿಸಿದರು.

ರಾಸ್ ಬಿಹಾರಿ ಬೋಸರ ಒಟ್ಟೂ ಕ್ರಾಂತಿಕಾರಿ ಜೀವನದಲ್ಲಿ ಅವರ ಜೊತೆಗೆ ಸುಭಾಷ್ ಚಂದ್ರ ಬೋಸರಲ್ಲದೆ ಅರವಿಂದ್ ಘೋಷ್, ಖುದಿರಾಮ್ ಬೋಸ್ ಬಾಘಾ ಜತಿನ್ ಮುಂತಾದ ಪ್ರಮುಖರೂ ಇದ್ದರು. ಲೇಖಕ, ಪತ್ರಕರ್ತರೂ ಆಗಿದ್ದ ರಾಸ್ ಬಿಹಾರಿ ಬೋಸರಿಗೆ ಜಪಾನ್ ಸರ್ಕಾರ Order of the Rising Sun ಎಂಬ ಗೌರವ ನೀಡಿತ್ತು. ದೇಶಕ್ಕಾಗಿ ತನ್ನ ಇಡೀ ಜೀವನವನ್ನು ಮುಡಿಪಾಗಿಟ್ಟು ಸ್ವಾರ್ಥರಹಿತ, ಕಷ್ಟಕರವಾದ ಕ್ರಾಂತಿಕಾರಕ ಮಾರ್ಗದಲ್ಲಿ ಬದುಕಿದ ರಾಸ್ ಬಿಹಾರಿ ಬೋಸರು ಜನವರಿ 21, 1945 ರಂದು ಟೋಕಿಯೋದಲ್ಲಿ ನಿಧನರಾದರು.

## ಪುಸ್ತಕ ಪರಿಚಯ

## ಮಾಡಿ ಮಡಿದವರು

**ಲೇಖಕರು:** ಬಿ.ಪಿ.ಪ್ರೇಮ್ ಕುಮಾರ್
**ಪ್ರಕಾಶಕರು:** ರಾಷ್ಟ್ರೋತ್ಥಾನ ಸಾಹಿತ್ಯ
**ಬೆಲೆ:** ರೂ. 325




ಪಶ್ಚಿಮ ಬಂಗಾಳದ ಚಿತ್ತಗಾಂವ್ (ಈಗ ಬಾಂಗ್ಲಾದೇಶಕ್ಕೆ ಸೇರಿದೆ)ನಲ್ಲಿ ಓರ್ವ ಸಮಾನ್ಯ ಶಾಲಾ ಶಿಕ್ಷಕನಾಗಿದ್ದ ಸೂರ್ಯಸೇನ್‌ನ ನೇತೃತ್ವದಲ್ಲಿ ಹದಿಹರೆಯದ ಬಾಲಕರು-ತರುಣಿಯರು ಸಶಸ್ತ್ರ ಹೋರಾಟಕ್ಕಿಳಿದು ಬ್ರಿಟಿಷರನಿದ್ದೆಗೆಡಿಸಿದ್ದನ್ನು, ತತ್ಪರಿಣಾಮವಾಗಿ ಬಂಗಾಳದ ಹಳ್ಳಿಹಳ್ಳಿಗಳಲ್ಲೂ ಕ್ರಾಂತಿಜ್ವಾಲೆ ಹರಡಿದ್ದನ್ನೂ ಸಾಧಾರವಾಗಿ ವಿವರಿಸುವ ಅಪೂರ್ವ ಕಥನ – 'ಮಾಡಿ ಮಡಿದವರು'. ತರುಣಿಯೊಬ್ಬಳು ಮೊತ್ತಮೊದಲ ಬಾರಿಗೆ ಕಾರ್ಯಾಚರಣೆಯ ನೇತೃತ್ವವಹಿಸಿ ಬಲಿದಾದಗೈಯುವ ಮೂಲಕ ಕ್ರಾಂತಿಕಾರೀ ಹೋರಾಟದ ರಣಕಣಕ್ಕೆ ಹೆಣ್ಣುಮಕ್ಕಳೂ ಪ್ರತ್ಯಕ್ಷವಾಗಿ ಧುಮುಕಲು ಪ್ರೇರಣೆಯಾದ ಹೋರಾಟವಿದು. ಗಾಂಧಿಯವರು 'ಮಾಡು ಇಲ್ಲವೇ ಮಡಿ' ಎಂದು ಘೋಷಿಸುವುದಕ್ಕೂ ಮೊದಲೇ 'ಮಾಡು ಮತ್ತು ಮಡಿ' ಎಂದು ರಣಹೂಂಕಾರಗೈದ ಚಿತ್ತಗಾಂವ್‌ನ ಕ್ರಾಂತಿಕಾರಿಗಳು ನೇತಾಜಿ ಸುಭಾಷ್‌ಚಂದ್ರ ಬೋಸರು 'ಭಾರತೀಯ ರಾಷ್ಟ್ರೀಯ ಸೇನೆ' ರಚಿಸುವದಕ್ಕೂ ಮೊದಲೇ 'ಭಾರತೀಯ ಗಣತಂತ್ರ ಸೇನೆ'ಯನ್ನು ಕಟ್ಟಿ ಬ್ರಿಟೀಷರ ವಿರುದ್ಧ ಸಶಸ್ತ್ರ ಯುದ್ಧ ನಡೆಸಿದ್ದರ ಪ್ರೇರಣಾದಾಯೀ ಕಥನವಿದು. ಸಂಪರ್ಕಕ್ಕಾಗಿ – +91 63605 81957

## ಪೂರ್ಣಗೊಳ್ಳದ ಒಂದು ಪಯಣ-ಚರಖಿ ದಾದರೀ, ಹರಿಯಾಣ

ಪ್ರತಿಯೊಂದು ಪಯಣವು ತನ್ನ ಉದ್ದೇಶಿತ ತಾಣವನ್ನು ಸೇರುವ ಮೂಲಕ ಕೊನೆಗೊಳ್ಳಬೇಕು ಎಂಬ ನಿಯಮವೇನೂ ಇಲ್ಲ, ಕೆಲವು ಪಯಣಗಳು ಅಪೂರ್ಣವಾಗಿಯೇ ಉಳಿದು ಬಿಡುತ್ತವೆ. 12 ನವೆಂಬರ್ 1996 ರ ಸಂಜೆ ಇಂತಹ ಒಂದು ಘಟನೆ ಸಂಭವಿಸಿತು. ಹರಿಯಾಣದ ಚರಖೀ ದಾದರೀ ಜಿಲ್ಲೆಯು ಒಂದು ಭೀಕರ ಅಪಘಾತಕ್ಕೆ ಸಾಕ್ಷಿಯಾಯಿತು. ಹೃದಯವನ್ನು ನಡುಗಿಸುವ ಆ ಶಬ್ದ, ಭಯಾನಕವಾದ ಮಿಂಚಿನ ಆರ್ಭಟ ಹಾಗೂ ಭಯಂಕರವಾದ ಬೆಂಕಿಯ ಉಂಡೆಗಳ ತೀವ್ರತೆಯು ನೋಡು ನೋಡುತ್ತಿದಂತೆ ಹಳ್ಳಿಯ ಹೊಲ ಗದ್ದೆಗಳ ಮೇಲೆ ಬೀಳಲಾರಂಬಿಸಿದವು.

ಅದು ದೆಹಲಿಯಿಂದ ಅರಬ್ ನತ್ತ ಪಯಣಿಸುತ್ತಿದ್ದ ಒಂದು ಯಾತ್ರಿಕರ ವಿಮಾನ ಹಾಗೂ ದೆಹಲಿಯತ್ತ ಬರುತ್ತಿದ್ದ ಕಝುಕಿಸ್ತಾನ್ ನ ಸರಕು ವಿಮಾನಗಳ ಅವಶೇಷಗಳಾಗಿತ್ತು. ಈ ಎರಡು ವಿಮಾನಗಳ ಘರ್ಷಣೆಯಾದ ನಂತರ ಭೂಮಿಯ ಮೇಲೆ ಬಿದ್ದ ಇದರ ಮೊನಚಾದ ಭಾಗವು ಭೂಮಿಯಿಂದ 16 ಅಡಿ ಕೆಳಗೆ ಹೂತುಹೋಯಿತು.

ಒಂದೇ ಕ್ಷಣದಲ್ಲಿ ಸೌದಿ ವಿಮಾನದಲ್ಲಿದ್ದ 312 ಜನ ಹಾಗೂ ಕಝುಕಿಸ್ತಾನ ವಿಮಾನದ 37ಜನ ಮೃತ್ಯುವಶವಾಗಿದ್ದರು. ಚರಖಿ ದಾದರೀಯ ಸುತ್ತಮುತ್ತ ನಾಲ್ಕು-ಐದು ಕಿಲೋಮೀಟರ್ ದೂರದ ಢಾಣಿ ಫೌಗಾಟ್, ಖೇಡಿ ಸೋನಾವಾಲ್ ಮತ್ತು ಮಾಲಿಯಾವಾಸ್ ಗ್ರಾಮಗಳ ಗದ್ದೆಗಳಲ್ಲಿ ಸುಟ್ಟು ಕರಕಲಾಗಿ ಚಿಂದಿಯಾಗಿ 351ಶವಗಳು ಬಿದ್ದಿದ್ದವು. ಅಪಘಾತದ ಸುದ್ದಿ ತಿಳಿದ ತಕ್ಷಣ ಸರ್ಕಾರಿ ಸಿಬ್ಬಂದಿಗಳು ಬರುವ ಮೊದಲು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರು ಸ್ಥಳಕ್ಕೆ ಆಗಮಿಸಿದ್ದರು.

ಛಿದ್ರ ಛಿದ್ರವಾಗಿ ಚದುರಿಹೋಗಿದ್ದ ಶವಗಳ ನಡುವೆ ಬದುಕುಳಿದವರಿಗಾಗಿ ಹುಡುಕಾಡುತ್ತಿದ್ದ ಭಿವಾನಿ ಜಿಲ್ಲೆಯ ಅಂದಿನ ಸಂಘಚಾಲಕರಾದ ಜೀತಾರಾಮಜೀಯವರು ಸ್ವಯಂಸೇವಕರೊಂದಿಗೆ ಅಲ್ಲಿಗೆ ಬಂದು ನೋಡಿದಾಗ ಅತ್ಯಂತ ಭೀಕರ ವಾತಾವರಣವಿತ್ತು. ಒಂದು ಕ್ಷಣವನ್ನೂ ವ್ಯರ್ಥಮಾಡದೆ ಒಂದು ಗಂಟೆಯೊಳಗೆ ಪೆಟ್ರೊಮ್ಯಾಕ್ಸ್ ದೀಪಗಳು, ಜನರೇಟರ್, ನೀರು, ಇತ್ಯಾದಿ ಅಗತ್ಯ ವಸ್ತುಗಳ ವ್ಯವಸ್ಥೆ ಮಾಡಲಾಯಿತು. ಚಳಿಗಾಲದ ಆ ನಿಶ್ಶಬ್ದವಾದ ಕತ್ತಲೆಯಲ್ಲಿ ಒಬ್ಬರು ಇನ್ನೊಬ್ಬರಿಗೆ ಕಾಣದಂತಹ ಸಂದರ್ಭದಲ್ಲಿ ಪೆಟ್ರೊಮ್ಯಾಕ್ಸ್ ದೀಪಗಳ ಬೆಳಕಿನ ಸಹಾಯದಿಂದ ಸ್ವಯಂಸೇವಕರು ಬದುಕುಳಿದವರಿಗಾಗಿ ಹುಡುಕಾಡಲು ಪ್ರಾರಂಭಿಸಿದರು. ಆದರೆ ಕೇವಲ ಇಬ್ಬರೆ ಇಬ್ಬರು ಪ್ರಾಣ ಉಳಿಸಿಕೊಳ್ಳಲು ಹೋರಾಡುತ್ತಿದ್ದವರು ಸಿಕ್ಕಿದ್ದರು. ಆದರೆ ಜೀವನ್ಮರಣದ ಹೋರಾಟದಲ್ಲಿದ್ದ ಅವರನ್ನು ಸ್ಥಳದಲ್ಲಿ ಉಪಸ್ಥಿತರಿದ್ದ ಹೆಡ್ಗೇವಾರ್ ಚಿಕಿತ್ಸಾಲಯದ ತಂಡದವರಿಂದ ಉಳಿಸಿಕೊಳ್ಳಲಾಗಲಿಲ್ಲ.

24 ವರ್ಷಗಳ ಹಿಂದೆ ನೋಡಿದ ಆ ಭಯಾನಕ ದೃಶ್ಯದ ವಿಷಯ ಬಂದ ತಕ್ಷಣ ಅಂದಿನ ಸಂಘಚಾಲಕರಾದ ಶ್ರೀ ಜಿತರಾಮಜೀಯವರು ಇಂದಿಗೂ ಭಾವುಕರಾಗುತ್ತಾರೆ. ಅಲ್ಲಿನ ಸ್ಥಳೀಯ ರೈತರಾದ ಶ್ರೀ ಚಂದ್ರಭಾನ್ ಅವರ ಟ್ರ್ಯಾಕ್ಟರ್‌ನಲ್ಲಿ ತೀವ್ರವಾಗಿ ಸುಟ್ಟುಹೋಗಿದ್ದ ಶವಗಳನ್ನು ಸ್ವಯಂಸೇವಕರು ಸಾಗಿಸಿದರು. ಶವಗಳು ಕೊಳೆಯದಂತೆ ಕಾಪಾಡಲು ರಾತ್ರಿಯ 11ಗಂಟೆಯ ವೇಳೆಯಲ್ಲಿ ಐಸ್ ಗೆಡ್ಡೆಯ ಕಾರ್ಖಾನೆಯ ಬಾಗಿಲನ್ನು ತೆರೆಸಲಾಯಿತು ಎಂಬುದನ್ನು ಅವರು ನೆನಪಿಸುತ್ತಾರೆ.

ಭಿವಾನಿ, ಝುಜ್ಜರ್ ಹಾಗೂ ರೇವಾಡಿಯಂತಹ ಸುತ್ತಮುತ್ತಲಿನ ಪ್ರದೇಶಗಳಿಂದ ಐಸ್ ಸ್ಲಾಬ್‌ಗಳನ್ನು ತರಿಸಿಕೊಳ್ಳಲಾಯಿತು. ಸಮಯಕ್ಕೆ ಸರಿಯಾಗಿ ಉಪಸ್ಥಿತರಿದ್ದ ಎಸ್.ಪಿ. ಅವರ ಸಹಾಯದಿಂದ ಶವ ಸಂಸ್ಕಾರಕ್ಕೆ ಬೇಕಾಗುವ ಅವಶ್ಯ ವಸ್ತುಗಳ ಪಟ್ಟಿಯನ್ನು ಮಾಡಲಾಯಿತು. ಹಳ್ಳಿಯ ಜನರ ಸಹಾಯದಿಂದ ಶವ ಸಂಸ್ಕಾರಕ್ಕಾಗಿ ಶವ ಪೆಟ್ಟಿಗೆಯ ವ್ಯವಸ್ಥೆಯನ್ನು ಮಾಡಲಾಯಿತು. ಸಾವನ್ನಪ್ಪಿದ ಪ್ರಯಾಣಿಕರಲ್ಲಿ ಹೆಚ್ಚಿನವರು ಮುಸಲ್ಮಾನರು ಅಥವಾ ಕ್ರಿಶ್ಚಿಯನ್ನರಾಗಿದ್ದರು. ಹಾಗಾಗಿ ಭಿವಾನಿ ಜಿಲ್ಲೆಯ ಸ್ವಯಂಸೇವಕರಾದ ಸಂತರಾಮ್ ಜೀಯವರ ಫ್ಯಾಕ್ಟರಿಯಲ್ಲಿ ಗರಗಸದ ಮಿಶನ್ ನಿಂದ ಶವದ ಪೆಟ್ಟಿಗೆಯನ್ನು ತಯಾರಿಸಲಾಯಿತು.

ಬೆಳಿಗ್ಗೆ 5ಗಂಟೆಯೊಳಗೆ 159 ಶವಗಳನ್ನು ಭಿವಾನಿಯ ಸಿವಿಲ್ ಆಸ್ಪತ್ರೆಗೆ ಸಾಗಿಸಲಾಗಿತ್ತು. ಅಷ್ಟರೊಳಗೆ ಶ್ರೀ ಜೀತಾರಾಮ ಅವರ ನೇತೃತ್ವದಲ್ಲಿ ಸ್ವಯಂಸೇವಕರು ವಿಮಾನ ಅಪಘಾತ ಸಂತ್ರಸ್ತರ ಸಹಾಯ ಸಮಿತಿಯನ್ನು ರಚಿಸಿದ್ದರು. ಇದರಲ್ಲಿ ವಿಶ್ವ ಹಿಂದೂ ಪರಿಷತ್, ಆರ್ಯ ಸಮಾಜ, ವಿದ್ಯಾರ್ಥಿ ಪರಿಷತ್ ಹಾಗೂ ಗುರುದ್ವಾರ ಸಮಿತಿಗಳು ಸೇರಿದಂತೆ ಅನೇಕ ಸಾಮಾಜಿಕ ಸಂಸ್ಥೆಗಳ ಸದಸ್ಯರನ್ನು ಸೇರಿಸಿಕೊಂಡು ಸಮರೋಪಾದಿಯಲ್ಲಿ ಕಾರ್ಯ ನಿರ್ವಹಿಸಿದರು.

ಬೆಳಗಾಗುತ್ತಿದ್ದಂತೆ ಈ ಸುದ್ದಿ ಕಾಡ್ಗಿಚ್ಚಿನಂತೆ ಎಲ್ಲೆಡೆ ಹರಡಿದ್ದರಿಂದ ಮೃತರ ಸಂಬಂಧಿಕರು, ಮಾಧ್ಯಮದವರು, ಪೊಲೀಸ್ ಅಧಿಕಾರಿಗಳು ಘಟನಾ ಸ್ಥಳಕ್ಕೆ ಬಂದಿದ್ದರು. ಸಮಿತಿಯು ಇವರೆಲ್ಲರಿಗೂ ಪಾನೀಯ ಹಾಗೂ ಭೋಜನ ಇತ್ಯಾದಿಗಳ ವ್ಯವಸ್ಥೆಯನ್ನು ಮಾಡಿತು. ಯಾವ ಯಾತ್ರಿಗಳ ಸಂಬಂಧಿಕರು ಘಟನೆಯ ಸ್ಥಳಕ್ಕೆ ಬರಲಾಗಲಿಲ್ಲವೊ ಅಂಥಹ ಮೃತ ದೇಹಗಳನ್ನು ಹೂಳುವ ವ್ಯವಸ್ಥೆಯನ್ನು ಸ್ವಯಂಸೇವಕರೇ ಮಾಡಿದರು. ಇದಕ್ಕೆ ಸ್ಥಳೀಯ ಮೌಲ್ವಿ ಹಾಗೂ ದೆಹಲಿಯಿಂದ ಬಂದಿದ್ದ ಇಸ್ಲಾಮಿಯ ಪ್ರತಿನಿಧಿ ಮಂಡಳಿಯ ಸಹಾಯವನ್ನು ತೆಗೆದುಕೊಳ್ಳಲಾಯಿತು.

ಸಮಿತಿಯ ಕಾರ್ಯಕರ್ತರು ಮೂರು ದಿನಗಳ ಕಾಲ ಕಾರ್ಯನಿರ್ವಹಿಸಿದರು. ಸ್ಥಳದಲ್ಲಿ ಉಪಸ್ಥಿತರಿದ್ದ ಅಂದಿನ ಕ್ಷೇತ್ರ ಪ್ರಚಾರಕರಾದ ಶ್ರೀ ಪ್ರೇಮ್ ಗೋಯಲ್ ಅವರ ಪ್ರಕಾರ, ಮೊದಲ ಬಾರಿಗೆ ಮಸೀದಿಯಲ್ಲಿ ಸ್ವಯಂಸೇವಕರನ್ನು ಚರಖಿ ದಾದರಿಯ ಸ್ಥಳೀಯ ಮುಸ್ಲಿಂ ಸಮಾಜವು ಗೌರವಿಸಿತ್ತು.

ಈ ಸಂದರ್ಭದಲ್ಲಿ ಅಲ್ಲಿಯ ಮೌಲ್ವಿಯಾದ ಮೊಹಮ್ಮದ್ ಹಮೀದ್ ಅವರ ಮಾತಿನಲ್ಲಿ ಹೇಳುವುದಾದರೆ, ಅವರು ಸ್ವಯಂಸೇವಕರ ಯೋಗ ಕ್ಷೇಮಕ್ಕಾಗಿ ಪ್ರಾರ್ಥಿಸುತ್ತಾ "ಸಂಘದ ಸ್ವಯಂಸೇವಕರು ಕೇವಲ ಮಾನವೀಯತೆಯಿಂದ ಕೆಲಸ ಮಾಡುತ್ತಾರೆ" ಎಂದು ಹೇಳಿದರು. ಅಲ್ಲದೆ, ದುರ್ಘಟನೆಯ ವಿಷಯ ತಿಳಿಯುತ್ತಿದ್ದಂತೆ ಘಟನಾ ಸ್ಥಳಕ್ಕೆ ಬಂದ ಅಂದಿನ ಕೇಂದ್ರೀಯ ನಾಗರಿಕ ವಿಮಾನಯಾನ ಸಚಿವ ಶ್ರೀ ಇಬ್ರಾಹಿಂ ಅವರು "ಇವರು ಎಲ್ಲ ಜಾತಿ ಧರ್ಮವನ್ನು ಮೀರಿ ನಿಂತ ಮಾನವತೆಯ ಮೂರ್ತಿಗಳು" ಎಂದು ಸ್ವಯಂಸೇವಕರನ್ನು ಶ್ಲಾಘಿಸಿದರು.

## ನಾಗರಿಕ ಶಿಷ್ಟಾಚಾರ

## ಎಲ್ಲಾ ವೃತ್ತಿಯವರನ್ನೂ ಗೌರವಿಸೋಣ

ಜಗತ್ತಿನಲ್ಲಿ ಪ್ರಸ್ತುತ ಎಲ್ಲಾ ವೃತ್ತಿಗಳೂ ಮಹತ್ವವಾದದ್ದೇ. ಆರ್ಥಿಕ ನೆಲೆಗಟ್ಟಿನಲ್ಲಿ ಅಲ್ಲಿನ ಉದ್ಯೋಗಿಗಳಿಗೆ ಅವರವರ ಜವಾಬ್ದಾರಿಯ ಆಧಾರದ ಮೇಲೆ ಸಂಬಳ ಬರುತ್ತದೆಯಾದರೂ ವೃತ್ತಿಯ ಮಹತ್ವದಲ್ಲಿ ಯಾವುದೇ ಭಿನ್ನತೆ ಇಲ್ಲ. ಒಂದು ದೇಶಕ್ಕೆ ಅದರ ಪ್ರಧಾನಮಂತ್ರಿಯಿಂದ ಹಿಡಿದು ಅದರ ಸಾಮಾನ್ಯ ನಾಗರಿಕನವರೆಗೆ ಮಾಡುತ್ತಿರುವ ಎಲ್ಲಾ ವೃತ್ತಿಯೂ ಪ್ರಾಮುಖ್ಯತೆಯನ್ನು ವಹಿಸುತ್ತದೆ. ಹಾಗಾಗಿ ಯಾವುದೇ ವೃತ್ತಿ ಮಾಡುವ ವ್ಯಕ್ತಿಯನ್ನು ಕೀಳಾಗಿ ಕಾಣಬಾರದು. ಎಲ್ಲಾ ವೃತ್ತಿಗಳಿಗೆ ವೃತ್ತಿಗೌರವ ನೀಡಬೇಕು. ವೃತ್ತಿಯಲ್ಲಿ ಸ್ಥಾನಮಾನದ ಆಧಾರದ ಮೇಲೆ ತಾರತಮ್ಯ ಸಲ್ಲ. ಸಮಾಜದಲ್ಲಿ ವೃತ್ತಿಯಾಧಾರಿತವಾಗಿ ಮೇಲು, ಕೀಳೆಂಬ ಭಾವನೆ ಮೂಡಬಾರದು. ನಾವೆಲ್ಲರೂ ಒಂದೇ ಎನ್ನುವುದನ್ನು ಸಾರಬೇಕು. ಎಲ್ಲಾ ವೃತ್ತಿಯವರನ್ನೂ ಗೌರವಿಸಬೇಕು.



ಸಂಪಾದಕೀಯ ಸಹಕಾರ: ಡಾ. ಟಿ.ಎನ್. ಲೋಕೇಶ್, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯಕೃಷ್ಣ ಹೆಚ್ ವಿ, ಮೇಘಾ ಪ್ರಮೋದ್, ಪಂಚಮಿ ಬಾಕಿಲಪದವು

# ಸಾಲುದ್ದದ ಸುದ್ದಿಗಳು

## ಭಾರತದ ನಿರುದ್ಯೋಗ ದರ ಶೇ. 5.2 ಕ್ಕೆ ಇಳಿಕೆ




ಜುಲೈನಲ್ಲಿ ಭಾರತದ ನಿರುದ್ಯೋಗ ದರವು ಶೇ. 5.2 ಕ್ಕೆ ಇಳಿದಿದೆ ಎಂದು ಬಿಡುಗಡೆಯಾದ ಸಚಿವಾಲಯದ ಹೊಸ ಅಂಕಿಅಂಶ ಮಾಹಿತಿಯು ತಿಳಿಸಿದೆ. ಹಬ್ಬದ ಋತುವಿನ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕಾಲೋಚಿತ ನೇಮಕಾತಿ ಮತ್ತು ಕೃಷಿ ಚಟುವಟಿಕೆಯಲ್ಲಿನ ಏರಿಕೆಯೇ ಈ ಕುಸಿತಕ್ಕೆ ಪ್ರಮುಖ ಕಾರಣ. ಜೂನ್‌ನಲ್ಲಿ ಶೇ. 4.9 ಕ್ಕೆ ಹೋಲಿಸಿದರೆ ಜುಲೈನಲ್ಲಿ ಶೇ. 4.4 ಕ್ಕೆ ಇಳಿದಿದೆ. ಆದಾಗ್ಯೂ, ನಗರ ಪ್ರದೇಶಗಳಲ್ಲಿ ಸಾಧಾರಣ ಏರಿಕೆ ಕಂಡುಬಂದಿದ್ದು, ಹಿಂದಿನ ತಿಂಗಳು ಶೇ. 7.1 ರಿಂದ ಶೇ. 7.2 ಕ್ಕೆ ಏರಿದೆ. ಯುವ ನಿರುದ್ಯೋಗವು ಹೆಚ್ಚು ಮಿಶ್ರ ಚಿತ್ರಣವನ್ನು ನೀಡಿದೆ. ನಗರಗಳಲ್ಲಿ, 15 ರಿಂದ 29 ವರ್ಷ ವಯಸ್ಸಿನವರ ನಿರುದ್ಯೋಗ ದರವು ಜೂನ್‌ನಲ್ಲಿ ಶೇ. 18.8 ರಿಂದ ಜುಲೈನಲ್ಲಿ ಶೇ. 19 ಕ್ಕೆ ಏರಿದೆ, ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಇದು ಶೇ. 13.8 ಕ್ಕೆ ಇಳಿದಿದೆ.

## 37.24 ಶತಕೋಟಿ ಡಾಲರ್ ತಲುಪಿದ ಭಾರತ ರಫ್ತು




ಜುಲೈನಲ್ಲಿ ಭಾರತದ ಸರಕು ರಫ್ತು ಬಲವಾದ ಕಾರ್ಯಕ್ಷಮತೆಯನ್ನು ತೋರಿಸಿದ್ದು, ವಾರ್ಷಿಕ ಆಧಾರದ ಮೇಲೆ ಸುಮಾರು ಶೇ 7.3 ರಷ್ಟು ಹೆಚ್ಚಳವಾಗಿ 37.24 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ತಾತ್ಕಾಲಿಕ ಮಾಹಿತಿಯ ಪ್ರಕಾರ, ಸರಕುಗಳ ರಫ್ತಿನ ಬೆಳವಣಿಗೆಯ ಪ್ರಮುಖ ಚಾಲಕರು ಎಂಜಿನಿಯರಿಂಗ್ ಸರಕುಗಳು, ರತ್ನಗಳು ಮತ್ತು ಆಭರಣಗಳು, ಎಲೆಕ್ಟ್ರಾನಿಕ್ಸ್, ಔಷಧಗಳು ಮತ್ತು ಸಾವಯವ ಮತ್ತು ಅಜೈವಿಕ ರಾಸಾಯನಿಕಗಳು. ಎಲೆಕ್ಟ್ರಾನಿಕ್ ಸರಕುಗಳ ರಫ್ತು ಜುಲೈ 2024ರಲ್ಲಿ 2.81 ಶತಕೋಟಿ ಡಾಲರ್‌ಗಳಿಂದ ಕಳೆದ ತಿಂಗಳು 3.77 ಶತಕೋಟಿ ಡಾಲರ್‌ಗಳಿಗೆ ಸುಮಾರು ಶೇ.34 ರಷ್ಟು ಹೆಚ್ಚಾಗಿದೆ. ಆದರೆ ಜುಲೈನಲ್ಲಿ ಸರಕುಗಳ ವ್ಯಾಪಾರ ಕೊರತೆಯು ಎಂಟು ತಿಂಗಳ ಗರಿಷ್ಠ 27.35 ಶತಕೋಟಿ ಡಾಲರ್‌ಗಳಿಗೆ ಏರಿದೆ. ಆಮದುಗಳಲ್ಲಿ ಶೇ 8.6 ರಷ್ಟು ತೀವ್ರ ಏರಿಕೆಯಿಂದಾಗಿ ಇದು ಸಂಭವಿಸಿದೆ, ಇದು ಈ ತಿಂಗಳಲ್ಲಿ 64.59 ಶತಕೋಟಿ ಡಾಲರ್‌ಗಳಷ್ಟಿತ್ತು. ಅಂದಾಜಿನ ಪ್ರಕಾರ, ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್ ನಿಂದ ಜುಲೈ ಅವಧಿಯಲ್ಲಿ, ಸರಕುಗಳ ರಫ್ತು 149.20 ಶತಕೋಟಿ ಡಾಲರ್‌ಗಳಿಗೆ ಏರಿದೆ, ಆದರೆ ಆಮದು 244.01 ಶತಕೋಟಿ ಡಾಲರ್‌ಗಳಿಗೆ ಏರಿದೆ. ಇದೇ ಅವಧಿಯಲ್ಲಿ ಸರಕು ಮತ್ತು ಸೇವೆಗಳ ಒಟ್ಟು ರಫ್ತು 277.63 ಶತಕೋಟಿ ಡಾಲರ್ ಎಂದು ಅಂದಾಜಿಸಲಾಗಿದೆ, ಇದು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 5.23 ರಷ್ಟು ಬೆಳವಣಿಗೆಯಾಗಿದೆ.

## ಭಾರತದ ನಂ.1 ಸುರಕ್ಷಿತ ನಗರವಾಗಿ ಹೊರಹೊಮ್ಮಿದ ಮಂಗಳೂರು

2025 ರಲ್ಲಿ ಭಾರತದ ಟಾಪ್ 10 ಸುರಕ್ಷಿತ ನಗರಗಳ ಪಟ್ಟಿ ಹೊರಬಿದ್ದಿದೆ. 2025 ರ ಮಧ್ಯಭಾಗದ ನಂಬಿಯೊ ಸುರಕ್ಷತಾ ಸೂಚ್ಯಂಕದ ಇತ್ತೀಚಿನ ಶ್ರೇಯಾಂಕದಲ್ಲಿ ಭಾರತವು ವಿಶ್ವದ ಸುರಕ್ಷಿತ ದೇಶಗಳಲ್ಲಿ 67 ನೇ ಸ್ಥಾನದಲ್ಲಿದೆ, 55.8 ಅಂಕಗಳನ್ನು ಗಳಿಸಿದೆ. ಆದರೆ, ನಗರವಾರು ಸುರಕ್ಷತಾ ಶ್ರೇಯಾಂಕದಲ್ಲಿ, ಮಂಗಳೂರು ಭಾರತದ ಸುರಕ್ಷಿತ ನಗರವೆಂದು ಸ್ಥಾನ ಪಡೆದಿದೆ. ಕಡಿಮೆ ಅಪರಾಧ ದರಗಳು ಮತ್ತು ಬಲವಾದ ನಾಗರಿಕ ಮೂಲಸೌಕರ್ಯಕ್ಕಾಗಿ ಪ್ರಶಂಸಿಸಲ್ಪಟ್ಟಿದೆ. ಜಾಗತಿಕವಾಗಿ 74.2 ಸುರಕ್ಷತಾ ಸೂಚ್ಯಂಕ ಅಂಕಗಳೊಂದಿಗೆ 49 ನೇ ಸ್ಥಾನದಲ್ಲಿದೆ. ಗುಜರಾತ್‌ನಲ್ಲಿ, ವಡೋದರಾ, ಅಹಮದಾಬಾದ್ ಮತ್ತು ಸೂರತ್ ಎಂಬ ಮೂರು ನಗರಗಳು ಕ್ರಮವಾಗಿ 69.2, 68.2 ಮತ್ತು 66.6 ಸುರಕ್ಷತಾ ಅಂಕಗಳೊಂದಿಗೆ ನಂತರದ ಸ್ಥಾನದಲ್ಲಿವೆ. ನೋಯ್ಡಾ ಮತ್ತು ಗಾಜಿಯಾಬಾದ್ ಜೊತೆಗೆ ರಾಜಧಾನಿ ನವದೆಹಲಿ ಅತ್ಯಂತ ಅಸುರಕ್ಷಿತ ಭಾರತೀಯ ನಗರಗಳಲ್ಲಿ ಸ್ಥಾನ ಪಡೆದಿವೆ. ವಿಶೇಷವಾಗಿ ಮಹಿಳೆಯರಿಗೆ ಸುರಕ್ಷತೆಯ ಬಗ್ಗೆ ನಗರಗಳ ಹೆಚ್ಚುತ್ತಿರುವ ಕಾಳಜಿಗಳು ಅವುಗಳನ್ನು ಸೂಚ್ಯಂಕದ ಕೆಳಕ್ಕೆ ತಳ್ಳಿವೆ, ದೆಹಲಿ ಅಪರಾಧ ಸೂಚ್ಯಂಕ ಅಂಕಗಳಲ್ಲಿ 59.03, ಗಾಜಿಯಾಬಾದ್ 58.44 ಮತ್ತು ನೋಯ್ಡಾ 55.1 ಪಡೆದುಕೊಂಡಿವೆ.

## 200 ಕೋಟಿ ವಹಿವಾಟುಗಳನ್ನು ದಾಟಿದ ಆಧಾರ್ ಫೇಸ್ ಅಥೆಂಟಿಕೇಶನ್ ಸಿಸ್ಟಮ್

ಆಧಾರ್ ಫೇಸ್ ಅಥೆಂಟಿಕೇಶನ್ ಸಿಸ್ಟಮ್ ಒಂದು ಪ್ರಮುಖ ಮೈಲಿಗಲ್ಲನ್ನು ತಲುಪಿದ್ದು, ಆಗಸ್ಟ್ 10, 2025 ರ ವೇಳೆಗೆ 200 ಕೋಟಿ ವಹಿವಾಟುಗಳನ್ನು ದಾಟಿದೆ. ಕೇವಲ ಆರು ತಿಂಗಳಲ್ಲಿ ವಹಿವಾಟುಗಳ ಸಂಖ್ಯೆ 100 ಕೋಟಿಯಿಂದ 200 ಕೋಟಿಗೆ ದ್ವಿಗುಣಗೊಂಡಿದೆ. ಈ ಸಾಧನೆಯ ಕುರಿತು ಮಾತನಾಡಿದ ಯುಐಡಿಎಐ ಸಿಇಒ ಭುವನೇಶ್ ಕುಮಾರ್, ಇಷ್ಟು ಕಡಿಮೆ ಸಮಯದಲ್ಲಿ 200 ಕೋಟಿ ಆಧಾರ್ ಫೇಸ್ ಅಥೆಂಟಿಕೇಶನ್ ವಹಿವಾಟುಗಳನ್ನು ತಲುಪಿರುವುದು, ಆಧಾರ್‌ನ ಸುರಕ್ಷಿತ, ಅಂತರ್ಗತ ಮತ್ತು ನವೀನ ದೃಢೀಕರಣ ಪರಿಸರ ವ್ಯವಸ್ಥೆಯಲ್ಲಿ ನಿವಾಸಿಗಳು ಮತ್ತು ಸೇವಾಪೂರೈಕೆದಾರರು ಹೊಂದಿರುವ ನಂಬಿಕೆ ಮತ್ತು ವಿಶ್ವಾಸವನ್ನು ಒತ್ತಿಹೇಳುತ್ತದೆ. ಈ ಪ್ರಯಾಣವು ಅದರ ಸ್ಕೇಲೆಬಿಲಿಟಿ ಮತ್ತು ದೇಶದ ಡಿಜಿಟಲ್ ಸಿದ್ಧತೆಗೆ ಸಾಕ್ಷಿಯಾಗಿದೆ ಎಂದರು.

## ವಿಶ್ವದ ಮೂರನೇ ಅತಿದೊಡ್ಡ ಆಟೋಮೊಬೈಲ್ ಉದ್ಯಮವಾಗಿ ಹೊರಹೊಮ್ಮಿದೆ ಭಾರತ

ಭಾರತವು ವಿಶ್ವದ ಮೂರನೇ ಅತಿದೊಡ್ಡ ಆಟೋಮೊಬೈಲ್ ಉದ್ಯಮವಾಗಿ ಹೊರಹೊಮ್ಮಿದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ. ನವದೆಹಲಿಯಲ್ಲಿ ವಿಶ್ವ ಜೈವಿಕ ಇಂಧನ ದಿನದಂದು ಹಸಿರು ಕ್ರಾಂತಿ – 2025 ಅನ್ನು ಉದ್ದೇಶಿಸಿ ಮಾತನಾಡಿದ ಗಡ್ಕರಿ, ಪ್ರಸ್ತುತ ಅಮೆರಿಕದ ಆಟೋಮೊಬೈಲ್ ಉದ್ಯಮದ ಗಾತ್ರ 78 ಲಕ್ಷ ಕೋಟಿ ರೂಪಾಯಿಗಳಾಗಿದ್ದು, ಚೀನಾ 49 ಲಕ್ಷ ಕೋಟಿ ರೂಪಾಯಿಗಳಾಗಿದ್ದು, ಭಾರತ 22 ಲಕ್ಷ ಕೋಟಿ ರೂಪಾಯಿಗಳಷ್ಟು ಹೆಚ್ಚಾಗಿದೆ ಎಂದು ಹೇಳಿದರು. ಆಟೋಮೊಬೈಲ್ ಉದ್ಯಮವು ಇಲ್ಲಿಯವರೆಗೆ 4 ಕೋಟಿ 50 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಿದೆ ಎಂದು ಅವರು ಹೇಳಿದರು. ಭಾರತದ ಭವಿಷ್ಯದ ಇಂಧನ ಭೂದೃಶ್ಯಕ್ಕೆ ಹಸಿರು ಹೈಡ್ರೋಜನ್‌ನ ಮಹತ್ವವನ್ನು ಗಡ್ಕರಿ ಎತ್ತಿ ತೋರಿಸಿದರು. 2024 ರಲ್ಲಿ ದೇಶದ ಎಥೆನಾಲ್ ಮಿಶ್ರಣ ಕಾರ್ಯಕ್ರಮವು ಶೇಕಡಾ 15 ರಷ್ಟು ತಲುಪಿದೆ, ಇದು 2025–2026 ರ ವೇಳೆಗೆ ಎಥೆನಾಲ್ 20 ಗುರಿಯತ್ತ ಒಂದು ಹೆಜ್ಜೆಯಾಗಿದೆ ಎಂದು ಅವರು ಉಲ್ಲೇಖಿಸಿದ್ದಾರೆ. ಮೇಕ್ ಇನ್ ಇಂಡಿಯಾ ಯೋಜನೆಯ ಅಡಿಯಲ್ಲಿ ಕೈಗೊಳ್ಳಲಾದ ನಿರ್ಣಯಗಳು ಈ ಅಭಿವೃದ್ಧಿಗೆ ಸಹಕಾರಿಯಾಗಿದೆ.

# ಸುಸ್ಥಿರ ಕೃಷಿ ಬರಗಾಲವನ್ನು ದೂರಮಾಡಬಲ್ಲದು ಎನ್ನುವುದನ್ನು ಸಾರಿದ ಮಹಿಳೆಯರು

ಪ್ರೇರಣಾ

ಹಳ್ಳಿ ಮಂದಿ ವಿಭಿನ್ನವಾಗಿ ಯೋಚನೆ ಮಾಡುವುದರಲ್ಲಿ ನಿಸ್ಸೀಮರು. ಹೊಸ ಹೊಸ ಸಾಧನೆಗಳತ್ತ ಅವರ ಮನಸ್ಸು ವಾಲುತ್ತಲೇ ಇರುತ್ತದೆ. ಹೊಸ ಯೋಜನೆಗಳನ್ನು ಸಮರ್ಥವಾಗಿ ನಿಭಾಯಿಸಿ ಯಶಸ್ಸನ್ನು ಪಡೆಯುವುದರಲ್ಲೂ ಹಳ್ಳಿಗರು ಹಿಂದೆಯಿಲ್ಲ. ಕರ್ನಾಟಕದ ಧಾರವಾಡ ಜಿಲ್ಲೆಯ ತೀರ್ಥ ಎಂಬ ಸಣ್ಣ ಹಳ್ಳಿಯ ಜನರು ಹವಾಮಾನ ವೈಪರೀತ್ಯವನ್ನು ಎದುರಿಸಿ ಸಾಧನೆ ಮಾಡಿದ ಘಟನೆ ಎಲ್ಲರಿಗೂ ಮಾದರಿ.

ಹಳ್ಳಿಯ ಮಹಿಳಾ ತಂಡವು ಹವಾಮಾನ ಬದಲಾವಣೆಗೆ ಸಂಬಂಧಿಸಿದ ಕ್ರಮಗಳನ್ನು ಹೇಗೆ ಜಾರಿಗೊಳಿಸಬಹುದು ಮತ್ತು ಜಾಗತಿಕ ಮನ್ನಣೆಯನ್ನು ಹೇಗೆ ಗಳಿಸಬಹುದು ಅನ್ನುವುದನ್ನು ಜಗತ್ತಿಗೆ ಪರಿಚಯ ಮಾಡಿಕೊಟ್ಟಿದೆ. ಈ ಮೂಲಕ ಹವಾಮಾನ ಬದಲಾವಣೆಯನ್ನು ಎದುರಿಸಲಿರುವ ಹೊಸ ಯಶಸ್ವಿ ಪ್ರಯತ್ನಗಳಿಗೆ ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ (UNDP) ದಿಂದ ಕೊಡಮಾಡಲ್ಪಡುವ 2025ರ ಸಮಭಾಜಕ ಉಪಕ್ರಮ ಪ್ರಶಸ್ತಿಯನ್ನು ಕುಂದಗೋಳ ತಾಲೂಕಿನ ತೀರ್ಥದ ಬೀಬಿ ಫಾತಿಮಾ ಮಹಿಳಾ ಸ್ವ-ಸಹಾಯ ಗುಂಪು ಪಡೆದುಕೊಂಡಿದೆ. ಪ್ರಕೃತಿ ಆಧಾರಿತವಾಗಿ ಎದುರಾಗುವ ಹವಾಮಾನ ಸಮಸ್ಯೆಗಳನ್ನು ಎದುರಿಸುವಲ್ಲಿ ಈ ತಂಡವು ಯಶಸ್ವಿಯಾಗಿದೆ ಅನ್ನುವುದಕ್ಕೆ ಪ್ರಶಸ್ತಿ ಸಾಕ್ಷಿಯಾಗಿದೆ.

ಪ್ರಕೃತಿಯಲ್ಲಿ ಉಂಟಾಗುವ ಹವಾಮಾನ ವೈಪರೀತ್ಯಗಳನ್ನು ಎದುರಿಸಿ ಸಾಗುವ ಬೀಬಿ ಫಾತಿಮಾ ಅವರ ಹಾದಿಯು ಸುಲಭದ್ದಾಗಿರಲಿಲ್ಲ. ಆದರೆ ಇಟ್ಟ ಹೆಜ್ಜೆಯನ್ನು ದೃಢವಾಗಿಟ್ಟು, ಸಾಧನೆಗೆ ಮನಸ್ಸು ಮುಖ್ಯ ಎಂದು ತೋರಿಸಿಕೊಟ್ಟಿದ್ದಾರೆ.

2018ರಲ್ಲಿ, 15 ಮಹಿಳೆಯರು ಒಂದು ಗುಂಪಾಗಿ ಜತೆಗೂಡಿದರು. ಅವರ ಉದ್ದೇಶ ಬರಗಾಲವನ್ನು ಎದುರಿಸಿಕೊಂಡು, ಸಾಂಪ್ರದಾಯಿಕ



ಕೃಷಿ ವಿಧಾನಗಳನ್ನು ಬಳಕೆ ಮಾಡುವುದು, ಪೋಷಣೆಯನ್ನು ಹೆಚ್ಚು ಮಾಡುವುದು, ಜತೆಗೆ ಉತ್ತಮ ಆದಾಯವನ್ನು ಗಳಿಸುವುದಾಗಿತ್ತು. ಹಾಗಾಗಿ ನೀರಿಲ್ಲದ ಸ್ಥಿತಿಯಲ್ಲಿ, ಬೆಳೆ ಬೆಳೆಯಲು ಹಾಗೂ ಉತ್ತಮ ಫಸಲನ್ನು ಪಡೆಯಲು ರಾಗಿ ಬೆಳೆ ಬೆಳೆಯುವುದಾಗಿ ಆರಿಸಿಕೊಂಡರು.

ನೈಸರ್ಗಿಕ ಕೃಷಿ ವಿಧಾನಗಳನ್ನು ಬಳಸಿಕೊಂಡು ಸುಮಾರು 30 ಹಳ್ಳಿಗಳಲ್ಲಿ ರಾಗಿ ಆಧಾರಿತ ಮಿಶ್ರ ಬೆಳೆ ಪದ್ಧತಿಗಳನ್ನು ಬಳಸಿಕೊಂಡು ಬೆಳೆ ಬೆಳೆದರು. ಹವಾಮಾನ ವೈಪರೀತ್ಯಗಳನ್ನು ಎದುರಿಸಿ, ಸ್ಥಳೀಯ ಬೆಳೆ ಪ್ರಭೇದಗಳನ್ನು ಸಂರಕ್ಷಿಸಲು ಬೀಜ ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ಹೆಚ್ಚಿನ ಆದಾಯವನ್ನು ಪಡೆಯುವ ದೃಷ್ಟಿಯಿಂದ ಜಾನುವಾರು ಸಾಕಣೆ ಮತ್ತು ತೋಟಗಾರಿಕೆಯನ್ನು ತಮ್ಮ ರಾಗಿ ಕೃಷಿಯ ಜತೆಗೆ ಸೇರಿಸಿಕೊಂಡರು. ಹೀಗೆ ಬಹುಬೆಳೆಗಳನ್ನು ಬೆಳೆಯುವ ಮೂಲಕ ಸಂಪನ್ಮೂಲಗಳ ಬಳಕೆಯನ್ನು ಸಮರ್ಥವಾಗಿ ನಿಭಾಯಿಸಿದರು. ಸ್ಥಳೀಯ ಆಹಾರ ಕ್ರಮದಲ್ಲಿ ರಾಗಿಯನ್ನು ಮತ್ತೆ ಪ್ರಧಾನ ಆಹಾರವನ್ನಾಗಿ ಮಾಡುವ ಮೂಲಕ ಆಹಾರ ಮತ್ತು ಪೌಷ್ಟಿಕಾಂಶ ಭದ್ರತೆಯತ್ತ ಚಿತ್ತವಿರಿಸಿದರು. ಆರೋಗ್ಯದ ಬಗೆಗೆ ಗಂಭೀರ ಗಮನ ವಹಿಸಿದರು. ಪಾಲುದಾರ ಸಂಸ್ಥೆಗಳ ಬೆಂಬಲದೊಂದಿಗೆ, ಮಹಿಳೆಯರೇ ಮುನ್ನಡೆಸುವ ರಾಗಿ ಸಂಸ್ಕರಣಾ ಘಟಕವನ್ನು ಸ್ಥಾಪಿಸಿದರು. ಆಗ ಉತ್ಪನ್ನಗಳಿಗೆ ಮೌಲ್ಯವನ್ನು ನೀಡಿದರು, ಜತೆಗೆ ಸಿದ್ಧವಾದ ರಾಗಿ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಲಭಿಸುವಂತೆ ಮಾಡಿದರು. ಈ ಬದಲಾವಣೆಯಿಂದಾಗಿ ಅವರ ಆದಾಯ ಹೆಚ್ಚಿತು. ಮಾತ್ರವಲ್ಲದೆ, ಮಹಿಳೆಯರ ಒಗ್ಗಟ್ಟು, ಯಶಸ್ಸು ಇತರ ಹಳ್ಳಿಗಳ ಮಂದಿಗೆ ಪ್ರೇರಣೆಯಾಯಿತು.

ಮಳೆಯಾಶ್ರಿತ ಹೊಲಗಳಲ್ಲಿ ಪರಿಸರ ಸ್ನೇಹಿ ಅಭ್ಯಾಸಗಳಿಂದ ಹಿಡಿದು ಮೌಲ್ಯವರ್ಧಿತ ರಾಗಿ ಉತ್ಪನ್ನಗಳನ್ನು ಮಾರಾಟ ಮಾಡುವವರೆಗೆ, ಬೀಬಿ ಫಾತಿಮಾ ಸ್ವಸಹಾಯ ಸಂಘವು ಪರಿಸರ ಸುಸ್ಥಿರತೆ ಮತ್ತು ಆರ್ಥಿಕ ಸಬಲೀಕರಣವನ್ನು ದೃಷ್ಟಿಯಲ್ಲಿರಿಸಿಕೊಂಡಿತ್ತು. ಹಂತ ಹಂತವಾಗಿ ಯೋಜನೆಗಳನ್ನು ರೂಪಿಸಿಕೊಂಡು, ಯಶಸ್ಸಿನ ಮೆಟ್ಟಿಲೇರಿದರು.

ಈ ತಂಡವು ಪರಿಶ್ರಮ ಹಾಗೂ ತಾಳ್ಮೆಯನ್ನು ಮೂಲ ಮಂತ್ರವನ್ನಾಗಿರಿಸಿಕೊಂಡು ಕೆಲಸದಲ್ಲಿ ತೊಡಗಿಸಿಕೊಂಡ ಕಾರಣ, ಯಶಸ್ಸು ಕೈಗೆಟುಕಿದೆ. ಸಾಂಪ್ರದಾಯಿಕ ಬೆಳೆಗಳ ಬಗ್ಗೆ ಹೆಮ್ಮೆಯನ್ನು ಮೂಡಿಸುವಂತೆ ಈ ತಂಡವು ಕಾರ್ಯನಿರ್ವಹಿಸಿದೆ. ಆಧುನಿಕ ವ್ಯವಸ್ಥೆಯಲ್ಲುಂಟಾಗುವ ಸವಾಲುಗಳಿಗೆ ಪುರಾತನ ವ್ಯವಸ್ಥೆಯಲ್ಲಿ ಪರಿಹಾರವಿದೆ ಅನ್ನುವುದನ್ನು ಸಾಬೀತುಗೊಳಿಸಿದೆ.

ಸವಾಲುಗಳು ಎಲ್ಲಾ ಕ್ಷೇತ್ರಗಳಲ್ಲೂ ಇರುತ್ತವೆ. ಆದರೆ ಆ ಸವಾಲುಗಳಿಗೆ ಅತ್ಯಂತ ಸಕ್ಷಮ ನಿರ್ಣಯಗಳನ್ನು ತೆಗೆದುಕೊಳ್ಳುವ ಮೂಲಕ ಪರಿಹಾರವನ್ನು ಕಂಡುಕೊಳ್ಳಬಹುದು ಎನ್ನುವುದಕ್ಕೆ ಈ ನಿದರ್ಶನವೇ ಸಾಕ್ಷಿ. ಅದಕ್ಕಿಂತಲೂ ಮಿಗಿಲಾಗಿ ಕೃಷಿಯಲ್ಲಿ ಖುಷಿಯಿಲ್ಲ ಎಂಬ ಆಪಾದನೆಯನ್ನು ದೂರಗೊಳಿಸಿ ಸುಸ್ಥಿರ ಮಾದರಿಯಲ್ಲಿ ಮಾಡುವ ಕೃಷಿ ಇಡೀ ಊರಿನ ಚಿತ್ರಣವನ್ನೇ ಬದಲಾಯಿಸಬಲ್ಲದು ಎಂದು ಈ ಮಹಿಳೆಯರ ಗುಂಪು ತಿಳಿಸಿಕೊಟ್ಟಿದೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.vskkarnataka.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th AUGUST 2025
REGISTERED NEWS PAPER RNI 36528/79 LICENSE TO POST
WITHOUT PREPAYMENT LICENSE NO PMG/BG/WPP-46/2024-2026 AT BENGALURU PSO
BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 01-09-2025



## ಶ್ರೀನಗರದಲ್ಲಿ ಕೃಷ್ಣ ಜನ್ಮಾಷ್ಟಮಿ ಆಚರಣೆ

ಕಾಶ್ಮೀರದಲ್ಲಿ ಹಿಂದೆ ಊಹಿಸಲೂ ಸಾಧ್ಯವಿಲ್ಲ ಎಂದು ಭಾವಿಸಲಾಗಿದ್ದ ಘಟನೆಗಳು ಇಂದು ನಡೆಯುತ್ತಿವೆ. ಕಾಶ್ಮೀರದ ಹೃದಯಭಾಗವಾದ ಶ್ರೀನಗರದ ಲಾಲ್ ಚೌಕ್‌ನಲ್ಲಿ ಕೃಷ್ಣ ಜನ್ಮಾಷ್ಟಮಿಯನ್ನು ಹಿಂದೂಗಳು ಈ ಬಾರಿ ನಿರ್ಭಯವಾಗಿ ಆಚರಿಸಿದ್ದಾರೆ. ಈ ಬೆಳವಣಿಗೆ ಆಧ್ಯಾತ್ಮಿಕ ಸ್ವರೂಪದ್ದಾಗಿದ್ದರೂ, ಈ ಪ್ರದೇಶದಲ್ಲಿ ಸಂಭವಿಸುತ್ತಿರುವ



ವಿಶಾಲವಾದ ಪರಿವರ್ತನೆಯನ್ನು ಆಳವಾಗಿ ಸಂಕೇತಿಸುತ್ತದೆ, ಇದು ಬದಲಾಗುತ್ತಿರುವ ಕಾಶ್ಮೀರದ ವಾಸ್ತವಗಳ ಬಗ್ಗೆ ಬಹಳಷ್ಟನ್ನು ಹೇಳುತ್ತದೆ. ದಶಕಗಳ ಕಾಲ, ಕಾಶ್ಮೀರ ಕಣಿವೆ ಸೂಕ್ಷ್ಮ, ಸಂಘರ್ಷ ಪೀಡಿತ ವಲಯವಾಗಿ ಉಳಿದಿತ್ತು, ಅಲ್ಪಸಂಖ್ಯಾತ ಸಮುದಾಯಗಳ ಧಾರ್ಮಿಕ ಕಾರ್ಯಕ್ರಮಗಳು ಅಶಾಂತಿಯ ಭಯದಿಂದ ನಿಗ್ರಹಿಸಲ್ಪಟ್ಟಿದ್ದವು ಅಥವಾ ನಿರ್ಬಂಧಿಸಲ್ಪಟ್ಟವು. ನಿರ್ದಿಷ್ಟವಾಗಿ ಲಾಲ್ ಚೌಕ್ ರಾಜಕೀಯ ಅಸ್ಥಿರತೆಯ ಸಂಕೇತವಾಗಿ ನಿಂತಿತ್ತು, ಒಂದು ಕಾಲದಲ್ಲಿ ಪ್ರತ್ಯೇಕತಾವಾದಿ ಘೋಷಣೆಗಳು ಪ್ರತಿಧ್ವನಿಸಿದ ಸ್ಥಳವಾಗಿತ್ತು ಮತ್ತು ರಾಷ್ಟ್ರಧ್ವಜವನ್ನು ಹಾರಿಸುವುದು ತೀವ್ರ ವಿವಾದದ ವಿಷಯವಾಗಿತ್ತು. ಆದರೆ ಈಗ ಲಾಲ್‌ಚೌಕ್ ಸ್ಥಳವು ಭಕ್ತಿಗೀತೆಗಳು, ಮೆರವಣಿಗೆಗಳು ಮತ್ತು ಸ್ಪಷ್ಟವಾದ ಏಕತೆಯ ಪ್ರಜ್ಞೆಯೊಂದಿಗೆ ಸಂಪೂರ್ಣವಾದ ಶಾಂತಿಯುತ ಜನ್ಮಾಷ್ಟಮಿ ಆಚರಣೆಗಳಿಗೆ ಸಾಕ್ಷಿಯಾಗಿದೆ ಎಂಬುದು ಹೊಸ ಕಾಶ್ಮೀರದ ಮೈಲಿಗಲ್ಲು. ನಿರ್ಣಾಯಕ ಆಡಳಿತ, ಭದ್ರತಾ ಸುಧಾರಣೆಗಳು ಮತ್ತು ಸಮಗ್ರ ರಾಷ್ಟ್ರೀಯತೆಯ ದೃಷ್ಟಿಕೋನದ ಮೂಲಕ ಇದು ಸಾಧ್ಯವಾಗಿದೆ.

## NCERT ಪಠ್ಯದಲ್ಲಿ ಸೇನಾ ವೀರರಾದ ಮಾಣೆಕ್‌ಶಾ, ಉಸ್ಮಾನ್, ಸೋಮನಾಥ್ ಶರ್ಮಾ ಅಧ್ಯಾಯ

2024–25ನೇ ಶೈಕ್ಷಣಿಕ ವರ್ಷದ NCERT ಪಠ್ಯಕ್ರಮದಲ್ಲಿ ಭಾರತದ ಸೇನಾ ವೀರರಾದ ಫೀಲ್ಡ್ ಮಾರ್ಷಲ್ ಸ್ಯಾಮ್ ಮಾಣೆಕ್‌ಶಾ, ಬ್ರಿಗೇಡಿಯರ್ ಮೊಹಮ್ಮದ್ ಉಸ್ಮಾನ್ ಮತ್ತು ಮೇಜರ್ ಸೋಮನಾಥ್ ಶರ್ಮಾ ಅವರ ಕುರಿತು ಹೊಸ ಅಧ್ಯಾಯಗಳನ್ನು ಸೇರಿಸುವುದಾಗಿ ಕೇಂದ್ರ ಸರ್ಕಾರ ಗುರುವಾರ ಘೋಷಿಸಿದೆ. ವರದಿಯ ಪ್ರಕಾರ, ಅಧ್ಯಾಯಗಳನ್ನು ಕ್ರಮವಾಗಿ VIIIನೇ ತರಗತಿ (ಇಂಗ್ಲಿಷ್), VIIIನೇ ತರಗತಿ (ಉರ್ದು) ಮತ್ತು VIIನೇ ತರಗತಿ (ಉರ್ದು) ಗಳಲ್ಲಿ ಪರಿಚಯಿಸಲಾಗುತ್ತಿದೆ. ಈ ಕ್ರಮವು ವಿದ್ಯಾರ್ಥಿಗಳಿಗೆ "ಧೈರ್ಯ ಮತ್ತು ಕರ್ತವ್ಯದ ಸ್ಫೂರ್ತಿದಾಯಕ ನಿರೂಪಣೆಗಳನ್ನು" ಒದಗಿಸುವ ಗುರಿಯನ್ನು ಹೊಂದಿದೆ ಎಂದು ಪ್ರಕಟಣೆ ತಿಳಿಸಿದೆ.

ಫೀಲ್ಡ್ ಮಾರ್ಷಲ್ ಹುದ್ದೆಗೆ ಬಡ್ತಿ ಪಡೆದ ಭಾರತದ ಮೊದಲ ಅಧಿಕಾರಿ ಫೀಲ್ಡ್ ಮಾರ್ಷಲ್ ಸ್ಯಾಮ್ ಮಾಣೆಕ್‌ಶಾ ಎರಡನೇ ಮಹಾಯುದ್ಧ, 1947–48ರ ಪಾಕಿಸ್ತಾನದೊಂದಿಗಿನ ಯುದ್ಧ, 1962ರ ಚೀನಾ–ಭಾರತ ಯುದ್ಧ, ಮತ್ತು 1965 ಮತ್ತು 1971ರ ಇಂಡೋ–ಪಾಕ್ ಯುದ್ಧಗಳು ಸೇರಿದಂತೆ ಐದು ಪ್ರಮುಖ ಯುದ್ಧಗಳಲ್ಲಿ ಪ್ರಮುಖ ಪಾತ್ರ ವಹಿಸಿದರು.

"ನೌಶೇರಾದ ಸಿಂಹ" ಎಂದು ಕರೆಯಲ್ಪಡುವ ಬ್ರಿಗೇಡಿಯರ್ ಮೊಹಮ್ಮದ್ ಉಸ್ಮಾನ್ ಭಾರತೀಯ ಸೇನೆಯಲ್ಲಿ ಹಿರಿಯ ಅಧಿಕಾರಿಯಾಗಿದ್ದು, 1947–48ರ ಇಂಡೋ–ಪಾಕ್ ಯುದ್ಧದ ಸಮಯದಲ್ಲಿ ಧೈರ್ಯಶಾಲಿ ಕಾರ್ಯಾಚರಣೆಯನ್ನು ನಡೆಸಿದರು. ಅವರು ಜಮ್ಮು ಮತ್ತು ಕಾಶ್ಮೀರದಲ್ಲಿ ಝಂಗರ್ ಮತ್ತು ನೌಶೇರಾವನ್ನು ಮರಳಿ ವಶಪಡಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಬ್ರಿಗೇಡಿಯರ್ ಉಸ್ಮಾನ್ ಜುಲೈ 3, 1948 ರಂದು ಯುದ್ಧದಲ್ಲಿ ನಿಧನರಾದರು ಮತ್ತು ಮರಣೋತ್ತರವಾಗಿ ಮಹಾವೀರ ಚಕ್ರವನ್ನು ನೀಡಲಾಯಿತು.

ಮೇಜರ್ ಸೋಮನಾಥ ಶರ್ಮಾ ಭಾರತದ ಅತ್ಯುನ್ನತ ಯುದ್ಧಕಾಲದ ಶೌರ್ಯ ಪ್ರಶಸ್ತಿಯಾದ ಪರಮ ವೀರ ಚಕ್ರವನ್ನು ಪಡೆದ ಮೊದಲ ವ್ಯಕ್ತಿ. ಶ್ರೀನಗರ ವಿಮಾನ ನಿಲ್ದಾಣದ ಬಳಿ 1947–48ರ ಯುದ್ಧದ ಸಮಯದಲ್ಲಿ ಪಾಕಿಸ್ತಾನಿ ಒಳನುಸುಳುವವರ ವಿರುದ್ಧ ಹೋರಾಡುವಾಗ ಅವರು 25ನೇ ವಯಸ್ಸಿನಲ್ಲಿ ಯುದ್ಧದಲ್ಲಿ ನಿಧನರಾದರು. 1947ರ ನವೆಂಬರ್ 3 ರಂದು ನಡೆದ ಬದ್ಗಾಮ್ ಕದನದಲ್ಲಿ ಮೇಜರ್ ಶರ್ಮಾ ವೀರೋಚಿತ ನಿಲುವು ಭಾರತಕ್ಕೆ ಕಾಶ್ಮೀರ ಕಣಿವೆಯನ್ನು ಭದ್ರಪಡಿಸಿಕೊಳ್ಳಲು ಸಹಾಯ ಮಾಡಿತು.

## ಆರೆಸ್ಸೆಸ್‌ನ 100 ವರ್ಷಗಳ ಭವ್ಯ ಸಮರ್ಪಣಾ ಯಾತ್ರೆ ನಮಗೆ ಪ್ರೇರಣೆ: ಪ್ರಧಾನಿ ಮೋದಿ

100 ವರ್ಷಗಳನ್ನು ಪೂರೈಸುತ್ತಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ತಮ್ಮ ಸ್ವಾತಂತ್ರ್ಯೋತ್ಸವದ ಭಾಷಣದಲ್ಲಿ ಉಲ್ಲೇಖಿಸಿ ಹೆಮ್ಮೆಯನ್ನು ವ್ಯಕ್ತಪಡಿಸಿದ್ದಾರೆ. "ಇಂದಿಗೆ 100 ವರ್ಷಗಳ ಹಿಂದೆ ಸಂಘಟನೆಯೊಂದರ ಜನ್ಮವಾಯಿತು– ಅದುವೇ ರಾಷ್ಟ್ರೀಯ ಸ್ವಯಂಸೇವಕ ಸಂಘ. ವ್ಯಕ್ತಿ ನಿರ್ಮಾಣದಿಂದ ರಾಷ್ಟ್ರನಿರ್ಮಾಣದ ಸಂಕಲ್ಪದೊಂದಿಗೆ, 100 ವರ್ಷಗಳಿಂದ ಭಾರತಮಾತೆಯ ಕಲ್ಯಾಣದ ಗುರಿಯೊಂದಿಗೆ ಲಕ್ಷಾಂತರ ಸ್ವಯಂಸೇವಕರು ಮಾತೃಭೂಮಿಯ ಕಲ್ಯಾಣಕ್ಕಾಗಿ ತಮ್ಮ ಜೀವನವನ್ನು ಸಮರ್ಪಿಸಿದ್ದಾರೆ. ಸೇವೆ, ಸಮರ್ಪಣೆ, ಸಂಘಟನೆ ಮತ್ತು ಅಪ್ರತಿಮ ಆಡಳಿತ ಅವರ ಗುರುತಾಗಿದೆ. ಇಂತಹ ರಾಷ್ಟ್ರೀಯ ಸ್ವಯಂಸೇವಕ ಸಂಘ ಒಂದು ವಿಧಾನದಲ್ಲಿ ವಿಶ್ವದ ಅತಿ ದೊಡ್ಡ ಎನ್‌ಜಿಒ ಆಗಿದೆ" ಎಂದರು. ಅಲ್ಲದೇ "ನೂರು ವರ್ಷಗಳ ಅವರ ಸಮರ್ಪಣೆಯ ಇತಿಹಾಸವಿದೆ. ಇಂದು ನಾನು ಕೆಂಪುಕೋಟೆಯಿಂದ ನೂರು ವರ್ಷಗಳಿಂದ ರಾಷ್ಟ್ರ ಸೇವೆಗೆ ಕೊಡುಗೆ ನೀಡುತ್ತಿರುವ ಎಲ್ಲಾ ಸ್ವಯಂಸೇವಕರನ್ನು ಸ್ಮರಿಸುತ್ತೇನೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಈ ನೂರು ವರ್ಷಗಳ ಭವ್ಯ ಸಮರ್ಪಣಾ ಯಾತ್ರೆಯು ನಮಗೆ ಪ್ರೇರಣೆ ನೀಡುತ್ತಲೇ ಇದೆ ಎಂಬ ಬಗ್ಗೆ ದೇಶ ಹೆಮ್ಮೆ ಪಡುತ್ತದೆ" ಎಂದಿದ್ದಾರೆ.

## ಭಾರತದ ಶಕ್ತಿಗೆ ಸಾಕ್ಷಿ ಮಹಾಕುಂಭಮೇಳ: ಪ್ರಧಾನಿ ನರೇಂದ್ರ ಮೋದಿ

ಪ್ರಯಾಗರಾಜ್‌ನಲ್ಲಿ ನಡೆದ ಮಹಾ ಕುಂಭ ಮೇಳದ ಯಶಸ್ಸು ಭಾರತದ ಶಕ್ತಿಗೆ ಸಾಕ್ಷಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ. ಮಹಾ ಕುಂಭಮೇಳವು ಭಾರತದ ಚೈತನ್ಯವನ್ನು ಹೇಗೆ ಜೀವಂತಗೊಳಿಸಿದೆ ಎಂಬುದನ್ನು ಜಗತ್ತು ಕಂಡಿತು. ಪ್ರಯಾಗರಾಜ್‌ನಲ್ಲಿ ನಡೆದ ಮಹಾ ಕುಂಭಮೇಳದಲ್ಲಿ, ಭಾರತದ ಚೈತನ್ಯವನ್ನು ನಾವು ನೋಡಿದ್ದೇವೆ. ಒಂದೇ ಸ್ಥಳದಲ್ಲಿ ಕೋಟ್ಯಂತರ ಜನರು, ಒಂದು ಚಿಂತನೆ, ಒಂದು ಜೀವನ, ಒಂದು ಪ್ರಯತ್ನವಾಗಿ ನೆರೆದಿದ್ದರು. ಇದು ಜಗತ್ತಿಗೆ ಒಂದು ದೊಡ್ಡ ಅದ್ಭುತ. ಮಹಾ ಕುಂಭಮೇಳದ ಯಶಸ್ಸು ಭಾರತದ ಶಕ್ತಿಗೆ ಸಾಕ್ಷಿಯಾಗಿದೆ. ನಮ್ಮ ದೇಶವು ಭಾಷೆಗಳ ಚೈತನ್ಯದಿಂದ ತುಂಬಿದೆ" ಎಂದು ಪ್ರಧಾನಿ ಹೇಳಿದರು. ಪ್ರತಿ 12 ವರ್ಷಗಳಿಗೊಮ್ಮೆ ಆಯೋಜಿಸಲಾಗುವ ಮಹಾ–ಧಾರ್ಮಿಕ ಕಾರ್ಯಕ್ರಮವಾದ ಮಹಾ ಕುಂಭಮೇಳವನ್ನು ಪ್ರಯಾಗರಾಜ್‌ನಲ್ಲಿ ಜನವರಿ 13 ರಿಂದ 45 ದಿನಗಳ ಕಾಲ ನಡೆಸಲಾಯಿತು. ಈ ಮಹಾ ಕುಂಭ ಮೇಳದಲ್ಲಿ 62 ಕೋಟಿಗೂ ಹೆಚ್ಚು ಯಾತ್ರಿಕರು ಪವಿತ್ರ ಸ್ನಾನ ಮಾಡಿದರು.

## ಗಡಿ ನಿರ್ಣಯಕ್ಕೆ ವಿಧಾನ ಅನ್ವೇಷಿಸಲು 'ತಜ್ಞರ ತಂಡ' ರಚಿಸಿದ ಭಾರತ–ಚೀನಾ

ವಿವಾದಿತ ವಲಯಗಳಲ್ಲಿ ಗಡಿ ನಿರ್ಣಯಕ್ಕೆ ವಿಧಾನವನ್ನು ಅನ್ವೇಷಿಸಲು ಭಾರತ ಮತ್ತು ಚೀನಾ "ತಜ್ಞರ ಗುಂಪು" ಅನ್ನು ಸ್ಥಾಪಿಸಲು ಒಪ್ಪಿಕೊಂಡಿವೆ. ಭಾರತದ ವಿದೇಶಾಂಗ ಸಚಿವಾಲಯವು ಈ ಬಗ್ಗೆ ಘೋಷಣೆಯನ್ನು ಮಾಡಿದೆ. ಏಷ್ಯಾದ ಎರಡು ಶಕ್ತಿಗಳು ಮಿಲಿಟರಿ ಉದ್ವಿಗ್ನತೆ ಮತ್ತು ಭೌಗೋಳಿಕ ರಾಜಕೀಯ ಪೈಪೋಟಿಯಿಂದ ಹದಗೆಟ್ಟಿರುವ ಸಂಬಂಧಗಳನ್ನು ಮರುಸ್ಥಾಪಿಸಲು ಪ್ರಯತ್ನಿಸುತ್ತಿರುವ ನಡುವೆ ಈ ಘೋಷಣೆ ಬಂದಿದೆ. ಆರಂಭಿಕ ಗಡಿ ನಿರ್ಣಯ ಮಾದರಿಯು ಎರಡೂ ಕಡೆಯವರು ಮೊದಲು ಕಡಿಮೆ ವಿವಾದಾತ್ಮಕ ಗಡಿ ವಲಯಗಳನ್ನು, ವಿಶೇಷವಾಗಿ ಸಿಕ್ಕಿಂ ಮತ್ತು ಹಿಮಾಚಲದಲ್ಲಿ ಪರಿಹರಿಸಲು ಅನುವು ಮಾಡಿಕೊಡುತ್ತದೆ, ಆದರೆ ಅರುಣಾಚಲ ಮತ್ತು ಪೂರ್ವ ಲಡಾಖ್‌ನಂತಹ ಹೆಚ್ಚು ಕಷ್ಟಕರವಾದ ವಿವಾದಗಳನ್ನು ನಂತರ ಕೈಗೆತ್ತಿಕೊಳ್ಳುತ್ತದೆ. ಭಾಗಶಃ ಒಪ್ಪಂದಗಳ ಬದಲಿಗೆ ಗಡಿ ಸಮಸ್ಯೆಯ ಸಮಗ್ರ ಇತ್ಯರ್ಥಕ್ಕೆ ಈ ನಿರ್ಧಾರ ಅನುವು ಮಾಡಿಕೊಡಲಿದೆ. ಭಾರತ ಮತ್ತು ಚೀನಾ ಎರಡೂ ಯುಎಸ್‌ನೊಂದಿಗೆ ವ್ಯಾಪಾರ ಮತ್ತು ಭದ್ರತಾ ಘರ್ಷಣೆಯನ್ನು ಎದುರಿಸುತ್ತಿರುವ ಸಮಯದಲ್ಲಿ, ಬೀಜಿಂಗ್‌ನೊಂದಿಗೆ ಸಂಬಂಧಗಳನ್ನು ಸ್ಥಿರಗೊಳಿಸುವ ಭಾರತದ ಪ್ರಾಯೋಗಿಕ ಪ್ರಯತ್ನವನ್ನು ಈ ಕ್ರಮವು ಪ್ರತಿಬಿಂಬಿಸುತ್ತದೆ. ದಶಕಗಳ ಮಾತುಕತೆಗಳ ಹೊರತಾಗಿಯೂ ಚೀನಾ–ಭಾರತ ಗಡಿ ಇತ್ಯರ್ಥವಾಗದೆ ಉಳಿದಿದೆ. ಆಳವಾದ ಅಪನಂಬಿಕೆ ಮುಂದುವರಿಯುವ ಸಾಧ್ಯತೆಯಿದ್ದರೂ, ಪರಿಹಾರಗಳಿಗೆ ಆದ್ಯತೆ ನೀಡುವುದರಿಂದ ಉಲ್ಬಣವನ್ನು ಶಮನಗೊಳಿಸಲು ಸೀಮಿತ ಮಾರ್ಗಗಳನ್ನು ತೆರೆಯಬಹುದು ಎಂದು ವಿಶ್ಲೇಷಕರು ಅಭಿಪ್ರಾಯಿಸಿದ್ದಾರೆ.

## ಕೆನಡಾದ ಮಿಸ್ಸಿಸೌಗಾದಲ್ಲಿ 51 ಅಡಿ ಎತ್ತರದ ಶ್ರೀರಾಮನ ಪ್ರತಿಮೆ ಅನಾವರಣ



ಉತ್ತರ ಅಮೆರಿಕಾದಲ್ಲಿ 51 ಅಡಿ ಎತ್ತರದ ಶ್ರೀರಾಮನ ಪ್ರತಿಮೆಯನ್ನು ಇತ್ತೀಚೆಗೆ ಮಿಸ್ಸಿಸೌಗಾದಲ್ಲಿ ಅನಾವರಣಗೊಳಿಸಲಾಗಿದೆ. ಭಾರತದ ಅಯೋಧ್ಯೆಯಲ್ಲಿರುವ ಶ್ರೀರಾಮ ಜನ್ಮಭೂಮಿ ದೇವಾಲಯದಿಂದ ಸ್ಫೂರ್ತಿ ಪಡೆದು, ಈ ಪ್ರತಿಮೆಯ ನಿರ್ಮಾಣ ಕಾರ್ಯ ನಾಲ್ಕು ವರ್ಷಗಳ ಹಿಂದೆ ಪ್ರಾರಂಭವಾಯಿತು ಮತ್ತು ಈ ಪ್ರತಿಮೆಯ ಭಾಗಗಳನ್ನು ದೆಹಲಿಯಲ್ಲಿ ನಿರ್ಮಿಸಲಾಗಿದೆ. ಕೆನಡಾದಲ್ಲಿ ಜೋಡಿಸಲಾಯಿತು. ಇದರ ಉಕ್ಕಿನ ಚೌಕಟ್ಟು ಎಷ್ಟು ಪ್ರಬಲವಾಗಿದೆಯೆಂದರೆ ಅದು ನೂರು ವರ್ಷಗಳ ಕಾಲ ಬಾಳಿಕೆ ಬರುತ್ತದೆ ಮತ್ತು ಗಂಟೆಗೆ 200 ಕಿ.ಮೀ ವೇಗದಲ್ಲಿ ಗಾಳಿಯನ್ನು ತಡೆದುಕೊಳ್ಳಬಲ್ಲದು ಎಂದು ವರದಿಗಳು ತಿಳಿಸಿವೆ. ಟೊರೊಂಟೊ ಪಿಯರ್ಸನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿಯುವ ಪ್ರಯಾಣಿಕರು ವಿಮಾನಗಳಿಂದಲೇ ವಿಗ್ರಹವನ್ನು ಕಣ್ತುಂಬಿಕೊಳ್ಳಬಹುದು.

## ರೈಲ್ವೆ ಹಳಿಗಳ ನಡುವೆ ಸೌರ ಫಲಕ ಹೊಂದಿದ ದೇಶದ ಮೊದಲ ನಗರ ವಾರಣಾಸಿ

ಉತ್ತರ ಪ್ರದೇಶದ ವಾರಣಾಸಿಯು ರೈಲ್ವೆ ಹಳಿಗಳ ನಡುವೆ ಪೋರ್ಟಬಲ್ ಸೌರ ಫಲಕಗಳನ್ನು ಹೊಂದಿರುವ ದೇಶದ ಮೊದಲ ನಗರವಾಗಿದೆ. ಬನಾರಸ್ ಲೋಕೋಮೋಟಿವ್ ವರ್ಕ್ಸ್ (BLW), ವಾರಣಾಸಿಯು ರೈಲ್ವೆ ಹಳಿಗಳ ನಡುವೆ ಸ್ಥಾಪಿಸಲಾದ ಭಾರತದ ಮೊದಲ ತೆಗೆಯಬಹುದಾದ ಸೌರ ಫಲಕ ವ್ಯವಸ್ಥೆಯನ್ನು ನಿಯೋಜಿಸಿದೆ. X ಪೋಸ್ಟ್ ಹಂಚಿಕೊಂಡ ರೈಲ್ವೆ ಸಚಿವಾಲಯವು,"ಬನಾರಸ್ ಲೋಕೋಮೋಟಿವ್ ವರ್ಕ್ಸ್, ವಾರಣಾಸಿಯು ರೈಲ್ವೆ ಹಳಿಗಳ ನಡುವೆ ಭಾರತದ ಮೊದಲ 70 ಮೀಟರ್ ತೆಗೆಯಬಹುದಾದ ಸೌರ ಫಲಕ ವ್ಯವಸ್ಥೆಯನ್ನು (28 ಫಲಕಗಳು, 15KWp) ನಿಯೋಜಿಸಿದೆ – ಹಸಿರು ಮತ್ತು ಸುಸ್ಥಿರ ರೈಲು ಸಾರಿಗೆಯತ್ತ ಒಂದು ಹೆಜ್ಜೆ" ಎಂದು ಬಣ್ಣಿಸಿದೆ.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497
ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.